ವಿಜಯಪುರ | ಸಂಪುಟ 02 | ಸಂಚಿಕೆ 45 | ಪುಟ 4 | ₹ 3.00

https://udayarashminews.com  udayarashmi 7026028778

# ಉದಯ ರಶ್ಮಿ


Udayarashmi Kannada Daily  ಜನಪರ-ಜೀವಪರ  ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ  Editor: Indushekhar Manur

editor.udayarashmi@gmail.com  RNI NO: KARKAN/2023/86203  ಶನಿವಾರ, ಏಪ್ರಿಲ್ 06, 2024

"ಲೋಕಸಭೆ ಚುನಾವಣೆಯಲ್ಲಿ ಎನ್‌ಡಿಎ ಉತ್ತಮ ಭವಿಷ್ಯಕ್ಕಾಗಿ ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದೇನೆ. ಕೇಂದ್ರದಲ್ಲಿ ಮತ್ತೆ ಎನ್‌ಡಿಎ ಅಧಿಕಾರಕ್ಕೆ ಬಂದ್ರು, ಪ್ರಧಾನಿ ಮೋದಿ ಅವರು ನನ್ನ ಮೇಲೆ ವಿಶ್ವಾಸವಿಟ್ಟು ಅವಕಾಶ ಕೊಟ್ಟರೆ ಕೃಷಿ ಸಚಿವನಾಗಲು ಬಯಸುವೆ."

– ಹೆಚ್ ಡಿ ಕುಮಾರಸ್ವಾಮಿ, ಜೆಡಿಎಸ್ ನಾಯಕರು




### ದೆಹಲಿ ಅಬಕಾರಿ ನೀತಿ ಪ್ರಕರಣ । ತೆಲಂಗಾಣ ಮಾಜಿ ಸಿಎಂ ಪುತ್ರಿಯಾದ ಶಾಸಕಿ ಕೆ.ಕವಿತಾ

# ಕೆ.ಕವಿತಾ ಅವರ ಸಿಬಿಐ ವಿಚಾರಣೆಗೆ ಕೋರ್ಟ್ ಅನುಮತಿ

ದೆಹಲಿ: ಅಬಕಾರಿ ನೀತಿ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ತಿಹಾರ್ ಜೈಲಿನಲ್ಲಿರುವ ಭಾರತ್ ರಾಷ್ಟ್ರ ಸಮಿತಿ (ಬಿಆರ್‌ಎಸ್) ನಾಯಕಿ, ಶಾಸಕಿ ಕೆ. ಕವಿತಾ ಅವರನ್ನು ಪ್ರಶ್ನಿಸಲು ದೆಹಲಿ ನ್ಯಾಯಾಲಯವು ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ಅನುಮತಿ ನೀಡಿದೆ.

ತೆಲಂಗಾಣ ಮಾಜಿ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರ ಪುತ್ರಿ ಕವಿತಾ ಅವರನ್ನು ಮುಂದಿನ ತನಿಖೆಯ ವೇಳೆ ಹೊರಬಿದ್ದಿರುವ ಸಾಕ್ಷ್ಯಾಧಾರಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಬೇಕೆಂದು ಸಿಬಿಐ ನ್ಯಾಯಾಲಯಕ್ಕೆ ಮನವಿ ಮಾಡಿದೆ ಎಂದು ಬಾರ್ □□□ಂಡ್ ಬೆಂಚ್ ವರದಿ ಮಾಡಿದೆ.

ಬುಚ್ಚಿ ಬಾಬು ಅವರ ಫೋನ್‌ನಿಂದ ಚಾಟ್‌ಗಳು ಮತ್ತು ಭೂ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸಿಬಿಐ ಶುಕ್ರವಾರ ನ್ಯಾಯಾಲಯದಲ್ಲಿ ವಾದಿಸಿತು, ನಂತರ ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) □100 ಕೋಟಿ ಲಂಚವನ್ನು ಕಿಕ್‌ಬ್ಯಾಕ್‌ನಲ್ಲಿ ನೀಡಲಾಗಿದೆ ಎಂದು ಆರೋಪಿಸಲಾಗಿದೆ. ಈ ನಿಟ್ಟಿನಲ್ಲಿ ಕವಿತಾ ಅವರನ್ನು ಪರೀಕ್ಷಿಸುವ ಅಗತ್ಯವಿದೆ ಎಂದು ಸಿಬಿಐ ಹೇಳಿದೆ. ಬುಚ್ಚಿ ಬಾಬು ಕವಿತಾಗೆ ಸಂಬಂಧಿಸಿದ ಚಾರ್ಟರ್ಡ್ ಅಕೌಂಟೆಂಟ್ ಆಗಿದ್ದಾರೆ.

"ನಾನು ಸಲ್ಲಿಸಿದ ಮನವಿಗಳನ್ನು ಪರಿಗಣಿಸಿದ್ದೇನೆ ಮತ್ತು ಅದರ ದೃಷ್ಟಿಯಿಂದ ಅರ್ಜಿಯನ್ನು ಅನುಮತಿಸಲಾಗಿದೆ" ಎಂದು ನ್ಯಾಯಾಧೀಶರು ಪೀಠದಿಂದ ಉಲ್ಲೇಖಿಸಿದ್ದಾರೆ.

**ಕವಿತಾ ಬಂಧನ ಯಾಕೆ?**

ದೆಹಲಿ ಸರ್ಕಾರದ ಅಬಕಾರಿ ನೀತಿಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇಡಿ) ಮಾರ್ಚ್ 15 ರಂದು ಕವಿತಾ ಅವರನ್ನು ಬಂಧಿಸಿತ್ತು.



2021–22ರ ದೆಹಲಿಯ ಅಬಕಾರಿ ನೀತಿಯ ಅಡಿಯಲ್ಲಿ ದೊಡ್ಡ ಪಾತ್ರವನ್ನು ವಹಿಸಲು ಪ್ರಯತ್ನಿಸುತ್ತಿರುವ ಮದ್ಯದ ವ್ಯಾಪಾರಿಗಳ "ಸೌತ್ ಗ್ರೂಪ್" ಲಾಬಿಯ ಭಾಗವಾಗಿ ಕವಿತಾ ಇದ್ದಾರೆ ಎಂದು ಇಡಿ ಹೇಳಿಕೊಂಡಿದೆ. ತನಿಖಾ ಸಂಸ್ಥೆಯ ಪ್ರಕಾರ, 'ಸೌತ್ ಗ್ರೂಪ್' ಎಂದು ಕರೆಯಲ್ಪಡುವ ತೆಲಂಗಾಣ ಎಂಎಲ್‌ಸಿ ಕವಿತಾ, ಶರತ್ ರೆಡ್ಡಿ (ಅರಬಿಂದೋ ಗ್ರೂಪ್‌ನ ಪ್ರವರ್ತಕರು), ಮಾಗುಂಟ ಶ್ರೀನಿವಾಸುಲು ರೆಡ್ಡಿ (ವೈಎ□□□ರ್‌ಸಿಪಿ ಸಂಸದ, ಓಂಗೋಲ್), ಅವರ ಮಗ ರಾಘವ್ ಮಾಗುಂಟಾ ಮತ್ತು ಇತರರು ಇದ್ದರು.

ಇಡಿ ಪ್ರಕಾರ, ಕವಿತಾ ಅವರು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಆಪ್‌ಗೆ □100 ಕೋಟಿ ಕಿಕ್‌ಬ್ಯಾಕ್‌ಗಳನ್ನು ಪಾವತಿಸಿದ್ದಾರೆ. ಅವರು ಪ್ರಸ್ತುತ ನ್ಯಾಯಾಂಗ ಬಂಧನದಲ್ಲಿದ್ದಾರೆ. ಇಡಿ ಪ್ರಕರಣದಲ್ಲಿ ಕವಿತಾ ಅವರ ಮಧ್ಯಂತರ ಜಾಮೀನು ಅರ್ಜಿಯ ತೀರ್ಪನ್ನು ನ್ಯಾಯಾಲಯವು ಕಾಯ್ದಿರಿಸಿದ್ದು, ಆ ವಿಷಯದ ಆದೇಶವನ್ನು ಏಪ್ರಿಲ್ 8 ರಂದು ಪ್ರಕಟಿಸಲು ನಿರ್ಧರಿಸಲಾಗಿದೆ.

## ವಿದ್ಯುತ್ ಸಮಸ್ಯೆ: ಹೆಸ್ಕಾಂ ಕಛೇರಿಗೆ ಬೀಗ ಹಾಕಿ ಪ್ರತಿಭಟನೆ

**ಉದಯರಶ್ಮಿ ನ್ಯೂಸ್**

ಸಿಂದಗಿ: ಗುಬ್ಬೇವಾಡ ಮತ್ತು ಬನ್ನೇಟ್ಟಿ ಪಿಎ ಗ್ರಾಮದ ರೈತರಿಗೆ ಸತತವಾಗಿ ಎರಡು ತಿಂಗಳಿಂದ ಸರಿಯಾಗಿ ವಿದ್ಯುತ್ ಪೂರೈಕೆಯಾಗದೇ ರೈತರು ಕಂಗಾಲಾಗಿ, ದನಕರುಗಳಿಗೆ ನೀರು ಪರದಾಡುವ ಸ್ಥಿತಿ ಎದುರಾಗಿದೆ ಎಂದು ರೈತ ಧರ್ಮಣ್ಣ ಗಬಸಾವಳಗಿ ಹೇಳಿದರು.



ತಾಲೂಕಿನ ಗುಬ್ಬೇವಾಡ ಗ್ರಾಮದ ರೈತರಿಂದ ಪಟ್ಟಣದಲ್ಲಿರುವ ಹೆಸ್ಕಾಂ ಕಛೇರಿಗೆ ಬೀಗ ಜಡಿದು ಪ್ರತಿಭಟಿಸಿ ಮಾತನಾಡಿದ ಅವರು, ಈಗಾಗಲೇ ಎಇಇ ಅವರ ಗಮನಕ್ಕೆ ತಂದಿದ್ದರೂ ಅವರು ಯಾವುದೇ ಕ್ರಮಕೈಗೊಳ್ಳದೇ ದರ್ಪ ತೋರುತ್ತಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬನ್ನೇಟ್ಟಿ ಮತ್ತು ಗುಬ್ಬೇವಾಡ ಗ್ರಾಮದ ರೈತರಿಗೆ 350ವೋಲ್ಟ್ ವಿದ್ಯುತ್ ಪೂರೈಕೆ ಮಾಡಬೇಕು. ಮತ್ತು ರೈತರಲ್ಲಿ ಅಕ್ರಮವಾಗಿ ಹಣ ವಸೂಲಿ ಮಾಡುತ್ತಿರುವ ರೈತರ ಮೇಲೆ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಇದೇ ಸಂದರ್ಭದಲ್ಲಿ ಶಿವಾನಂದ ಕೊಂಡಗೂಳಿ ಮಾತನಾಡಿ, ಈಗಾಗಲೇ ಕೊಳವೆಬಾವಿ ತೆರೆದ ಬಾವಿಗಳಲ್ಲಿ ನೀರಿಲ್ಲದೇ ಸಮಸ್ಯೆಗಳು ಸೃಷ್ಠಿಯಾಗಿದೆ. ಅದರಲ್ಲಿ ಹೆಸ್ಕಾಂ ವತಿಯಿಂದ ಸರಿಯಾಗಿ ವಿದ್ಯುತ್ ಪೂರೈಕೆಯಾಗುತ್ತಿಲ್ಲ. ಇದನ್ನು ಸರಿಪಡಿಸುವಂತೆ ಮನವಿ ಮಾಡಿಕೊಂಡರು.

ಒಂದು ವೇಳೆ ಈ ಸಮಸ್ಯೆ ಪರಿಹರಿಸದಿದ್ದಲ್ಲಿ ಮತ್ತೆ ಇಲಾಖೆಯ ಮುಂದೆ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

> ತಕ್ಷಣದಲ್ಲಿ ಎರಡು ಗ್ರಾಮದ ರೈತರ ಸಮಸ್ಯೆಗೆ ಪರಿಹಾರ ನೀಡುತ್ತೇನೆ. ಮತ್ತು ರೈತರಿಂದ ಹಣ ವಸೂಲಿ ಮಾಡುವವರನ್ನು ಕುಲಂಕುಶವಾಗಿ ಪರಿಶೀಲನೆ ಮಾಡಿ ಅವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳುತ್ತೇನೆ.
>
> **– ಚಂದ್ರಕಾಂತ ನಾಯಕ, ಹೆಸ್ಕಾಂ ಎಇಇ**

ಈ ವೇಳೆ ಹೆಸ್ಕಾಂ ಅಧಿಕಾರಿ ಮನಯನ್ನು ಸ್ವೀಕರಿಸಿ ಮಾತನಾಡಿದ ಅವರು, ಗುಬ್ಬೇವಾಡ ಗ್ರಾಪಂ ವ್ಯಾಪ್ತಿಯಲ್ಲಿ ಕಡಿಮೆ ಇರುವ ವೋಲ್ಟೇಜ್‌ನ್ನು ಹೆಚ್ಚಿಗೆ ಮಾಡಿಸಿ ಸಮಸ್ಯೆ ಪರಿಹರಿಸಲಾಗುವುದು ಎಂದರು.


ಈ ವೇಳೆ ಸಿದ್ದು ಗಬಸಾವಳಗಿ, ಗೌರಿಶಂಕರ ಹುಬ್ಬಳ್ಳಿ, ಸಿದ್ದಲಿಂಗಪ್ಪ ಗಬಸಾವಳಗಿ, ಪಟೇಲ ಚಟ್ಟರಕಿ, ಗಂಗಾಧರ ಗಬಸಾವಳಗಿ, ಭೀಮಣ್ಣ ಜಾಯವಾಡಗಿ, ಮುತ್ತಣಗೌಡ ಪಾಟೀಲ, ಸಂತೋಷ ಗಬಸಾವಳಗಿ, ಶ್ರೀಶೈಲ ಕರಬಂಟನಾಳ, ಶಿವಾನಂದ ಲಾಳಸಂಗಿ, ಶರಣಪ್ಪ ನಾಯ್ಕೋಡಿ, ಹಣಮಂತ್ರಾಯ ಗಬಸಾವಳಗಿ, ಶರಣಬಸು ಜಾಯವಾಡಗಿ ಸೇರಿದಂತೆ ಅನೇಕರಿದ್ದರು.

### ರಾಜ ನುಡಿ

ವರ್ತಮಾನವೆಂಬ ಮನೆಯಲ್ಲಿ ಬೆಚ್ಚಗೆ ನೀವಿರುವಾಗ ಕಿಚ್ಚಿಡಲು ಭೂತವು ಬಂದು ನಿಮ್ಮ ಬಾಗಿಲನ್ನು ಬಡಿದರೆ ತೆಗೆಯದಿರಿ ಏಕೆಂದರೆ ಪದೇ ಪದೇ ಹಳೆಯದನ್ನೇ ಹೇಳಿ ಹೋಗುವ ಭೂತಕಾಲಕ್ಕೆ ಹೊಸದಾಗಿ ಹೇಳಲು ಏನೂ ಇರುವುದಿಲ್ಲ.

–ಡಾ. ರಾಜಶೇಖರ ನಾಗೂರ

### ವಚನ ಚಿಂತನ 349



*ಅಲ್ಲಿ ಇಲ್ಲಿ ಎಂಬುದಕ್ಕೆ ಎಲ್ಲಿಯೂ ನೀನೆ.*
*ಬಳ್ಳಿ ಚಿಗಿತು ಮರನ ನೆಮ್ಮಿ ಎಲ್ಲವ ಮುಸುಕಿದಂತೆ,*
*ಮೂಲದ ಇರವನರಿತು, ಸಲಹಿದಡೆಲ್ಲಕ್ಕೂ ಕಳೆ ಬಂದು ಬುಡವಾದಡೆ,*
*ಆ ಬಳ್ಳಿಯ ಕೊಯಿದಡೆ, ಎಲ್ಲವೂ ಒಣಗುವಂತೆ ನಿನ್ನ ಕಳೆ.*
*ಅನ್ಯಭಿನ್ನವಿಲ್ಲದೆ ಕಾಮ್ಯಾರ್ಥಕ್ಕೆ ಒಲವರವಾಗಿ ಎಲ್ಲಿಯೂ ನೀನೆ.*
*ಅಲೇಖನಾದ ಶೂನ್ಯ ಕಲ್ಲಿಂದ ತೊಲಗು, ನಿನ್ನಯ ಇರವಿನ ಪರಿಯ ತೋರಾ.*

12ನೇ ಶತಮಾನದ ಅನುಭಾವ ಮಂಟಪದಲ್ಲಿ ಚರ್ಚೆಗೆ ಒಳಪಟ್ಟು ಅಂತಿಮ ಹಂತ ತಲುಪಿದ ವಚನಗಳನ್ನು ಪ್ರತಿ ಮಾಡಿ ಸಂರಕ್ಷಿಸಿ ಹಾಗೂ ಪ್ರಚಾರಪಡಿಸುವ ಕಾಯಕದಲ್ಲಿ ಕಾರ್ಯನಿರತರಾಗಿದ್ದ ವಚನಭಂಡಾರಿ ಶಾಂತರಸರ ವಚನವಿದು ಈ ವಚನದಲ್ಲಿ ಜಗತ್ತಿನ ಉಗಮ ಹಾಗೂ ಅದರ ಸಂರಕ್ಷಣೆಗೆ ಕಾರಣಕರ್ತರಾಗಿರುವ ಮಹಾಲಿಂಗವು ಎಲ್ಲ ಸಚರಾಚರಗಳನ್ನು ಉಂಟುಮಾಡಿ ಅದರೊಳಗೂ ಹಾಗೂ ಹೊರಗೂ ಅಸ್ಥಿತ್ವದಲ್ಲಿದೆ ಅದನ್ನೇ "ಅಲ್ಲಿ ಇಲ್ಲಿ ಎಂಬುದಕ್ಕೆ ಎಲ್ಲಿಯೂ ನೀನೆ." ಎಂದಿದ್ದಾರೆ. ಅಂಗದೊಳಗೆ ಪ್ರಾಣಲಿಂಗವಾಗಿರುವ ಮಹಾಲಿಂಗವನ್ನು ಒಂದು ಮರಕ್ಕೆ ಹೋಲಿಸುತ್ತಾ ಮರವನ್ನು ಸುತ್ತುವ ಬಳ್ಳಿ ಪ್ರಾಣ ಲಿಂಗವಾಗಿದೆ ಅದು ಮರದ ಆಶ್ರಯದಲ್ಲಿ ಬೆಳೆದು ಮರವನ್ನು ಸಂಪೂರ್ಣ ಆವರಿಸಿ ಅದನ್ನು ಮರೆ ಮಾಡುತ್ತದೆ. ಬಳ್ಳಿಯ ಬುಡ ಕತ್ತರಿಸಿದರೆ ಮರವನ್ನು ಆವರಿಸಿರುವ ಈ ಬಳ್ಳಿಯು ಒಣಗಿದರು ಮರವೆ ಒಣಗಿದಂತೆ ಕಾಣುತ್ತದೆ. ಇದು ಅಂಗದೊಳಗಿನ ಪ್ರಾಣಶಕ್ತಿ ಹೋದಾಗ ಅಂಗವು ಚೈತನ್ಯ ರಹಿತ ಶವ ವಾಗುವುದನ್ನು ತೋರಿಸುತ್ತದೆ. ಅಂಗದೊಳಗಿನ ಚೈತನ್ಯವೇ ಮಹಾಲಿಂಗವೆಂಬುದು ವಚನದ ಆಶಯ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

## ಕರ್ನಾಟಕ ಹಾಳು ಮಾಡುತ್ತಿರುವ ಆರ್ಥಿಕ ನೀತಿಗಳು :ರವಿ

ಬೆಂಗಳೂರು: ರಾಜ್ಯ ಕಾಂಗ್ರೆಸ್ ಸರ್ಕಾರದ ಆರ್ಥಿಕ ನೀತಿಗಳು ಕರ್ನಾಟಕವನ್ನು ಹಾಳು ಮಾಡುತ್ತಿದೆ ಎಂದು ಶುಕ್ರವಾರ ಆರೋಪಿಸಿದ ಬಿಜೆಪಿ ನಾಯಕ ಸಿಟಿ ರವಿ, ಕೇರಳದಂತೆಯೇ ನಾವು ಸಾಲದ ಸುಳಿಯಲ್ಲಿ ಸಿಲುಕಿದ್ದೇವೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಎಎನ್ ಐ ಸುದ್ದಿಸಂಸ್ಥೆಯೊಂದಿಗೆ ಮಾತನಾಡಿದ ಅವರು, "ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲ್ಲದಿದ್ದರೆ ಕಾಶ್ಮೀರದಲ್ಲಿ ಮತ್ತೆ 370 ನೇ ವಿಧಿ ಹೇರುವುದಾಗಿ ಕಾಂಗ್ರೆಸ್ ಭರವಸೆ ನೀಡಿದೆ. ನಂತರ ಮತ್ತೆ ಸೈನಿಕರ ಮೇಲೆ ಕಲ್ಲು ತೂರಾಟ ಆರಂಭವಾಗುತ್ತದೆ. ಅವರು ಮತ್ತೆ ಬಾಬ್ರಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಮತ್ತೆ ಎಲ್ಲಾ ಯೋಜನೆಗಳು ಮುಗಿಯುತ್ತವೆ ಎಂದು ಹೇಳಿದರು.



ಕಾಂಗ್ರೆಸ್ ಯಾವಾಗಲೂ ಸೈನಿಕರ ಬಗ್ಗೆ ಇಲ್ಲಸಲ್ಲದ ಹೇಳಿಕೆಗಳನ್ನು ನೀಡುತ್ತಿದೆ. ಸೈನಿಕರ ಮೇಲೆ ಅನುಮಾನ ವ್ಯಕ್ತಪಡಿಸುವವರು ಯಾರು? ಅಂತಹವರ ಬಗ್ಗೆ ನಾವು ಏನು ಹೇಳುತ್ತೇವೆ? ಪುಲ್ವಾಮಾ ದಾಳಿಗೆ ಯಾರು ಹೊಣೆ ಎಂದು ನಮಗೆಲ್ಲರಿಗೂ ತಿಳಿದಿದೆ. ಸರ್ಜಿಕಲ್ ಸ್ಟ್ರೈಕ್ ನಿಂದ ಉಗ್ರರ ತರಬೇತಿ ಕೇಂದ್ರವನ್ನು ಧ್ವಂಸಗೊಳಿಸಲಾಯಿತು ಎಂಬುದು ನಮಗೆ ತಿಳಿದಿದೆ. ಪಾಕಿಸ್ತಾನ ಈ ವಿಚಾರಕ್ಕೆ ವಿಶ್ವಸಂಸ್ಥೆಯ ಮೊರೆ ಹೋಗಿತ್ತು.ಆಗಲೂ ಕಾಂಗ್ರೆಸ್ ಈ ವಿಚಾರದಲ್ಲಿ ಸಂಶಯ ವ್ಯಕ್ತಪಡಿಸಿತ್ತು. ಆ ಪಕ್ಷಕ್ಕೆ ಸನಾತನ ಧರ್ಮ ಮತ್ತು ಸೈನಿಕರ ಬಗ್ಗೆ ಅನುಮಾನವಿದೆ. ದೇಶಪ್ರೇಮಕ್ಕೆ ಸಂಬಂಧಿಸಿದ ವಿಚಾರಗಳ ಬಗ್ಗೆ ಅವರು ಸದಾ ಅನುಮಾನ ವ್ಯಕ್ತಪಡಿಸುತ್ತಾರೆ ಎಂದರು.


### ವಿಜಯಪುರದಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಟಿ.ಭೂಬಾಲನ್ ಸೂಚನೆ

## ತೆರೆದ ಕೊಳವೆಬಾವಿ ಮುಚ್ಚುವಲ್ಲಿ ನಾಗರಿಕರ ಜವಾಬ್ದಾರಿಯೂ ಇದೆ

**ಉದಯರಶ್ಮಿ ನ್ಯೂಸ್**

**ವಿಜಯಪುರ:** ತೆರೆದ ಕೊಳವೆಬಾವಿಗಳನ್ನು ಮುಚ್ಚುವಲ್ಲಿ ನಾಗರಿಕರ ಜವಾಬ್ದಾರಿಯೂ ಇರುತ್ತದೆ ಎಂದು ಜಿಲ್ಲಾಧಿಕಾರಿ ಟಿ ಭೂಬಾಲನ್ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರದಂದು, ಇಂಡಿ ತಾಲೂಕಿನ ಲಚ್ಯಾಣ ಗ್ರಾಮದ ತೋಟದ ಕೊಳವೆ ಬಾವಿಯಲ್ಲಿ ಸಿಲುಕಿದ್ದ ಮಗುವನ್ನು ಸುರಕ್ಷಿತವಾಗಿ ಸಂರಕ್ಷಣೆ ಮಾಡಿರುವ ಕುರಿತು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಾತ್ವಿಕ ಸತೀಶ ಮುಜಗೊಂಡ ಮಗುವಿನ ರಕ್ಷಣಾ ಕಾರ್ಯಾಚರಣೆಯಂತೆ ಎಲ್ಲಾ ಕಾರ್ಯಚರಣೆಗಳು ಯಶಸ್ವಿಗೊಳ್ಳುವುದಿಲ್ಲ, ಕೆಲವೇ ಕೆಲವು ಯಶಸ್ವಿಗೊಳ್ಳುತ್ತವೆ. ಈ ಹಿನ್ನಲೆಯಲ್ಲಿ ರೈತರು ಸಾರ್ವಜನಿಕರು ತಾವು ಕೊರಿಸುವ ಕೊಳವೆ ಬಾವಿಗಳ ಸುರಕ್ಷತೆಯನ್ನು ಕಾಯ್ದುಕೊಳ್ಳುವಲ್ಲಿ ಅವರ ಜವಾಬ್ದಾರಿಯೂ ಇದೆ. ಇದಕ್ಕೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆ ಇದ್ದು, ಇನ್ನು ಮುಂದೆ ಸುತ್ತೋಲೆಯ ಮಾನದಂಡಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲಾಗುವುದು. ಲಚ್ಯಾಣ ಗ್ರಾಮದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಳವೆಬಾವಿ ತೆಗೆದ ಏಜನ್ಸಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದೆ ಎಂದರು.



ಏ. 3ರಂದು ಸಂಜೆ 5:30ರ ಸುಮಾರಿಗೆ ಕೋಳವೆ ಬಾವಿಗೆ ಸಿಲುಕಿದ ಮಗುವನ್ನು ಗಮನಿಸಿದ ಪಾಲಕರು ತಕ್ಷಣವೇ ಸ್ಥಳೀಯ ಆಡಳಿತ ಅಧಿಕಾರಿಗಳಿಗೆ ತಿಳಿಸಿದ್ದರಿಂದ ಅಧಿಕಾರಿ ಮತ್ತು ಸಿಂಬಂದಿ ಮತ್ತು ಸ್ಥಳಿಯರೊಂದಿಗೆ ಕಾರ್ಯಪ್ರವೃತ್ತರಾಗಿ ಮಗುವನ್ನು ಯಶಸ್ವಿಯಾಗಿ ಸಂರಕ್ಷಿಸಲು ಸಾಧ್ಯವಾಗಿದೆ. ಇದಕ್ಕೆ ಗುಲಬರ್ಗಾದಿಂದ ಎಸ್‌ಡಿಆರ್‌ಎಫ್ ಹಾಗೂ ಹೈದ್ರಾಬಾದನಿಂದ ಎನ್‌ಡಿಆರ್‌ಎಫ್ ತಂಡಗಳು ಬಂದು ಕಾರ್ಯಾಚರಣೆಯನ್ನು ಯಶಸ್ವಿಗೊಳಿಸಿರುತ್ತವೆ.

ಜಿಲ್ಲಾ ಅಗ್ನಿಶಾಮಕ ದಳದ ಸಹಕಾರ ಹಾಗೂ ಜಿಲ್ಲಾ ಆರೋಗ್ಯ ಇಲಾಖೆ ವೈದ್ಯರು ಮಗುವಿನ ಆರೋಗ್ಯ ಸ್ಥಿತಿಗತಿಗಳ ಬಗ್ಗೆ ನೀಡುತಿದ್ದ ಮಾಹಿತಿಯು ಸಾಕಷ್ಟು ಅನಕೂಲವನ್ನು ಒದಗಿಸಿತು. ಪೊಲೀಸ್ ಇಲಾಖೆ ಸೇರಿ 200 ರಿಂದ 300 ಸಿಬ್ಬಂದಿ ಮಗುವಿನ ರಕ್ಷಣಾ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದ್ದಾರೆ. ಭಾಗವಹಿಸಿದವರಿಗೆಲ್ಲರಿಗೂ ಅಭಿನಂದನೆಗಳು ಎಂದರು.

ಜಿಲ್ಲಾ ವೈದ್ಯಾಧಿಕಾರಿ ಬಸವರಾಜ ಹುಬ್ಬಳ್ಳಿ ಮಾತನಾಡಿ, ಕೊಳವೆ ಬಾವಿಯಿಂದ ಮಗುವನ್ನು ತೆಗೆದ ತಕ್ಷಣ ಮಗುವಿನ ಆರೋಗ್ಯ ದೃಷ್ಟಿಯಿಂದ ಪ್ರಥಮ ಚಿಕಿತ್ಸೆಯನ್ನು ಅಂಬೋಲೆನ್ಸ್‌ನಲ್ಲಿಯೇ ನೀಡಿ ನಂತರ ಇಂಡಿ ತಾಲೂಕಾ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಅದಾದ ನಂತರ ಎರಡು ಗಂಟೆಯೊಳಗೆ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ರಕ್ತ ಪರೀಕ್ಷೆ ಹೃದಯ ಪರೀಕ್ಷೆ ಸೇರಿ ಇತರ ಪರೀಕ್ಷೆಗಳನ್ನು ನಡೆಸಿದ್ದು, ಮಗುವಿಗೆ ಯಾವುದೇ ಆರೋಗ್ಯ ಸಮಸ್ಯೆ ಉಂಟಾಗಿರುವದಿಲ್ಲ, ಇಂದು ಬೆಳಿಗ್ಗೆ ಮಗು ತಾಯಿಯ ಎದೆಹಾಲನ್ನು ಸೇವಿಸಿದ್ದು ಯಾವುದೆ ಆರೋಗ್ಯ ಸಮಸ್ಯೆ ಕಂಡು ಬಂದಿರುವದಿಲ್ಲ. ಇನ್ನೆರಡು ದಿನಗಳಲ್ಲಿ ಮಗುವಿನ ಆರೋಗ್ಯವನ್ನು ಗಮನಿಸಿ ಜಿಲ್ಲಾ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್‌ವರಿಷ್ಠಾಧಿಕಾರಿ ರಿಶಿ ಸೋನಾವಣೆ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಶಿ ಆನಂದ ಹಾಗೂ ಜಿಲ್ಲಾ ಅಗ್ನಿ ಶಾಮಕದಳ ಅಧಿಕಾರಿ ಇದ್ದರು.

### ಮುಳಸಾವಳಗಿಯಲ್ಲಿ ನಡೆದ ಮಹಾಶಕ್ತಿ ಕೇಂದ್ರ ಕಾರ್ಯಕರ್ತರ ಸಭೆಯಲ್ಲಿ ಸಂಸದ ಜಿಗಜಿಣಗಿ ಸ್ಪಷ್ಟನೆ

## ಜಿಲ್ಲೆ ಅಭಿವೃದ್ಧಿಗೆ ಮೋದಿಯವರಿಂದ ರೂ.1 ಲಕ್ಷ ಕೋಟಿ ಅನುದಾನ

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಜಿಲ್ಲೆಯ ಅಭಿವೃದ್ಧಿಗೆ 1 ಲಕ್ಷ ಕೋಟಿ ಅನುದಾನ ನೀಡಿದ ಪ್ರಧಾನಿ ಮೋದಿಯವರು ಮೂರನೇ ಬಾರಿಗೆ ಪ್ರಧಾನಿಯಾಗುವುದು ನಿಶ್ಚಿತ. ಅದಕ್ಕಾಗಿ ಬಿಜೆಪಿಗೆ ಮತ ನೀಡುವುದರ ಮೂಲಕ ದೇಶದ ಏಳಿಗೆಗೆ ಸಹಕರಿಸಿ ಎಂದು ಬಿಜೆಪಿ ಅಭ್ಯರ್ಥಿ, ಸಂಸದ ರಮೇಶ ಜಿಗಜಿಣಗಿ ಹೇಳಿದರು.

ತಾಲ್ಲೂಕಿನ ಮುಳಸಾವಳಗಿ ಗ್ರಾಮದಲ್ಲಿ ಶುಕ್ರವಾರ ಜರುಗಿದ ಮಹಾಶಕ್ತಿ ಕೇಂದ್ರ ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಮತ್ತು ಕಳೆದ ಬಿಜೆಪಿ ನೇತೃತ್ವದ ರಾಜ್ಯಸರ್ಕಾರ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ. ಜಿಲ್ಲೆಯಲ್ಲಿ ಈಗ ಏಳು ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಕಾರ್ಯ ಆರಂಭಗೊಂಡಿದೆ. ಆದರೆ ಕಾಂಗ್ರೆಸ್ ಸರ್ಕಾರಗಳು ಮಾತ್ರ ಯಾವುದೇ ಅಭಿವೃದ್ಧಿ ಮಾಡದೇ ಮಕ್ಕಳು, ಸಂಬಂಧಿಗಳಿಗೆ ಅಧಿಕಾರ ದೊರಕಿಸುವುದರಲ್ಲಿ ನಿರತವಾಗಿದೆ. ಈ ಬಾರಿಯ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದೊಂದಿಗೆ ಮೈತ್ರಿಯಾಗಿದ್ದು ಅತ್ಯಂತ ಸಂತೋಷದ ವಿಷಯ. ಇದು ನನ್ನ ಕೊನೆಯ ಚುನಾವಣೆಯಾಗಿದ್ದು, ಮತ್ತೊಮ್ಮೆ ಗೆದ್ದು ಮೋದಿಯವರ ಕೈ ಬಲಪಡಿಸಬೇಕಾಗಿದೆ. ಆದ್ದರಿಂದ ತಾವೆಲ್ಲ ಬಿಜೆಪಿ ಗೆಲುವಿಗಾಗಿ ಶ್ರಮವಹಿಸಿ ಎಂದರು.



ಮಾಜಿಶಾಸಕ ಸೋಮನಗೌಡ ಪಾಟೀಲ(ಸಾಸನೂರ) ಮಾತನಾಡಿ, ನಮ್ಮ ಸಂಸದರು ಸದ್ದಿಲ್ಲದೇ ಅಭಿವೃದ್ಧಿಯಲ್ಲಿ ನಿರತರಾದವರು ಅವರೆಂದೂ ಪ್ರಚಾರಕ್ಕೆ ಬೀಳಲಿಲ್ಲ. ಜಿಲ್ಲೆಯಲ್ಲಿ ಜೆಜೆಎಮ್ ಯೋಜನೆಯಡಿ ಕುಡಿಯುವ ನೀರಿಗಾಗಿ ಶ್ರಮಿಸಿದ್ದಾರೆ. ಕಳೆದ ಒಂದು ವರ್ಷದಲ್ಲಿ ಕಾಂಗ್ರೆಸ್ ಸರ್ಕಾರ ಯಾವುದೇ ಅನುದಾನ ಮಾಡದೇ ಕೇವಲ ಸುಳ್ಳು ಪ್ರಚಾರದಲ್ಲಿ ನಿರತವಾಗಿದೆ. ಆದ್ದರಿಂದ ಈ ಬಾರಿ ಮತ್ತೊಮ್ಮೆ ಬಿಜೆಪಿಗೆ ಮತ ನೀಡಿ ಮೋದಿಯವರ 400ರ ಗುರಿಯನ್ನು ಸಾಕಾರಗೊಳಿಸಿ ಎಂದು ಕರೆ ನೀಡಿದರು.

ವಿಧಾನ ಪರಿಷತ್ ಮಾಜಿಸದಸ್ಯ ಅರುಣ ಶಹಾಪೂರ, ಜಿಲ್ಲಾ ಬಿಜೆಪಿ ಅಧ್ಯಕ್ಷ ಆರ್.ಎಸ್.ಪಾಟೀಲ (ಕೂಚಬಾಳ), ಜಿಲ್ಲಾ ಕಾರ್ಯದರ್ಶಿ ರಮೇಶ ಮಸಬಿನಾಳ, ಸ್ಥಳೀಯ ಕಾರ್ಯಕರ್ತ ಬಸವರಾಜ ಕಲ್ಲೂರ, ಜೆಡಿಎಸ್ ಕಾರ್ಯಕರ್ತ ಸಂಗನಗೌಡ ಬಿರಾದಾರ, ಮಂಡಲ ಅಧ್ಯಕ್ಷ ಅವ್ವಣ್ಣ ಗ್ವಾತಗಿ ಮಾತನಾಡಿ ಮತ ಯಾಚಿಸಿದರು.

ನಿಂಗರಾಜ ಮಹಾರಾಜ, ಮತಾಬ್ ಮುಜಾವರ್, ಮಡುಗೌಡ ಪಾಟೀಲ, ಈರಣ್ಣಾ ರಾವೂರ, ಪ್ರಭುಗೌಡ ಬಿರಾದಾರ(ಅಸ್ಕಿ), ಶಿಲ್ಪಾ ಕುದರಗೊಂಡ, ಸಿದ್ದು ಬುಳ್ಳಾ, ರಾವುತಪ್ಪ ಮೂಲಿಮನಿ, ಭೀಮನಗೌಡ ಲಚ್ಯಾಣ, ಶ್ರೀಮಂತ ತಳವಾರ, ಚಿದಾನಂದ ಹಿಟ್ನಳ್ಳಿ, ಹುಸೇನ್ ಗೌಂಡಿ, ಪ್ರಕಾಶ ದೊಡಮನಿ, ದಾವುಲಸಾಬ್ ಇನಾಮದಾರ ಸೇರಿದಂತೆ ಕಾರ್ಯಕರ್ತರು, ಗ್ರಾಮಸ್ಥರು ಇದ್ದರು.

# ಡಾ.ಜಗಜೀವನರಾಮ ಜೀವನ ಸರ್ವರಿಗೂ ಸ್ಪೂರ್ತಿದಾಯಕ




**ಉದಯರಶ್ಮಿ ನ್ಯೂಸ್**

ವಿಜಯಪುರ: ವಿಜಯಪುರ ಜಿಲ್ಲಾ ಕಾಂಗ್ರೆಸ್ ಕಾರ್ಯಾಲಯದಲ್ಲಿ ಭಾರತದ ಮಾಜಿ ಉಪಪ್ರಧಾನಿ ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಮ ಅವರ 117ನೇ ಜನ್ಮದಿನ ಆಚ–ರಿಸಲಾಯಿತು.

ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಡಾ.ಬಾಬು ಜಗಜೀವನರಾಮ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಿ ಗೌರವ ನಮನಗಳನ್ನು ಸಲ್ಲಿಸಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಸುಬಾಷ ಕಾಲೇಬಾಗ ರವರು ಡಾ.ಬಾಬು ಜಗಜೀವನರಾಮ ಅವರು ಈ ದೇಶಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ, ದಲಿತ ಕುಟುಂಬದಲ್ಲಿ ಜನಿಸಿ ಛಲದಿಂದ ಉನ್ನತ ವ್ಯಾಸಂಗ ಪೂರೈಸಿದರು. ಸ್ವಾತಂತ್ರ ಸಂಗ್ರಾಮದಲ್ಲಿ ಗಾಂಧೀಜಿ ಮತ್ತು ನೆಹರೂ ಅವರ ನಿಕಟವರ್ತಿಗಳಾಗಿ ದೇಶಕ್ಕೆ ಸ್ವಾತಂತ್ರ ತಂದುಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಅತ್ಯಂತ ಮೇಧಾವಿಯಾಗಿದ್ದ ಡಾ.ಬಾಬು ಜಗಜೀವನರಾಮ ರವರು ದೀನ, ದಲಿತರು ಹಾಗೂ ಕಾರ್ಮಿಕ ವರ್ಗದವರ ಒಳಿತಿಗಾಗಿ ಹೋರಾಡಿದರು. ಸ್ವಾತಂತ್ರ್ಯಾನಂತರದ ಸರ್ಕಾರಗಳಲ್ಲಿ ಪ್ರಮುಖ ಖಾತೆಗಳನ್ನು ನಿಭಾಯಿಸಿ ದೇಶದ ಮೊಟ್ಟಮೊದಲ ಉಪಪ್ರಧಾನಿ ಹುದ್ದೆಗೇರಿದ ಖ್ಯಾತಿ ಡಾ.ಬಾಬು ಜಗಜೀವನರಾಮ ಅವರದು. ದೇಶವು ತೀವ್ರ ಬರಗಾಲಕ್ಕೆ ತುತ್ತಾಗಿ ತುತ್ತು ಅನ್ನಕ್ಕೂ ಕೂಡ ಪರದಾಡುತ್ತಿದ ಸಂದರ್ಭದಲ್ಲಿ ಆಹಾರ ಖಾತೆ ಸಚಿವರಾಗಿ ಈ ದೇಶದಲ್ಲಿ ಹಸಿರುಕ್ರಾಂತಿಯನ್ನು ಮಾಡಿ ದೇಶವು ಆಹಾರದಲ್ಲಿ ಸ್ವಾವಲಂಬಿಯಾಗುವಂತೆ ಮಾಡಿದರು. ಇವರ ಜೀವನ ಪ್ರತಿಯೊಬ್ಬ ಭಾರತೀಯರಿಗೂ ಸ್ಪೂರ್ತಿದಾಯಕವಾಗಿದೆ. ದೀನ ದಲಿತರು ಬಾಬೂಜಿಯವರ ಸಾಧನೆಯನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಬೀದಿಬದಿ ವ್ಯಾಪಾರಿಗಳ ವಿಭಾಗದ ಅಧ್ಯಕ್ಷರಾದ ಡಾ.ಸಿ.ಇ. ರಂಗಸ್ವಾಮಿ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರಾದ ಚಾಂದಸಾಬ ಗಡಗಲಾವ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ವಸಂತ ಹೊನಮೊಡೆ, ಓಬಿಸಿ ಜಿಲ್ಲಾ ಅಧ್ಯಕ್ಷ ಸಾಹೇಬಗೌಡ ಬಿರಾದಾರ, ಎಂ.ಎಂ. ಮುಲ್ಲಾ, ಫಿರೋಜ ಶೇಖ, ಸೋಮಣ್ಣ ತಳವಾರ, ಕೃಷ್ಣಾ ಲಮಾಣಿ, ಸಂತೋಷ ಬಾಲಗಾಂವಿ, ಮಹಾದೇವ ಜಾಧವ, ಎ.ಆರ್. ಕಂಬಾಗಿ, ಜಯಪ್ರಭು ಕೊಳಮಲಿ, ಭೀಮರಾಯ ಸೀತಿಮನಿ, ಮಹಾಲಿಂಗ ಕೆಂಗಲಗುತ್ತಿ, ರಮೇಶ ಪೂಜಾರಿ, ಶಾಂತವ್ವ ಹೊಸಮನಿ, ಅಬ್ದುಲ್‌ಪೀರಾ ಜಮಖಂಡಿ, ಬಸಪ್ಪ ಕೋಲಕಾರ ಮುಂತಾದವರು ಉಪಸ್ಥಿತರಿದ್ದರು.

# ಚುನಾವಣೆ ಕುರಿತು ಕಾಂಗ್ರೆಸ್ ಹಿಂದುಳಿದ ವರ್ಗಗಳ ಸಭೆ

**ಉದಯರಶ್ಮಿ ನ್ಯೂಸ್**




ವಿಜಯಪುರ: ವಿಜಯಪುರ ಜಿಲ್ಲಾ ಕಾಂಗ್ರೆಸ್ ಕಾರ್ಯಾಲಯದಲ್ಲಿ ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ವತಿಯಿಂದ ಲೋಕಸಭಾ ಚುನಾವಣೆ ಕುರಿತು ಸಭೆಯನ್ನು ಶುಕ್ರವಾರ ಕರೆಯಲಾಗಿ–ತ್ತು.

ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಅಧ್ಯಕ್ಷ ಸಾಹೇಬಗೌಡ ಬಿರಾದಾರ ವಹಿಸಿ ಮಾತನಾಡುತ್ತಾ, ಪ್ರಸ್ತುತ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ವಿಜಯಪುರ ಜಿಲ್ಲೆಯ ಎಲ್ಲ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ರಾಜ್ಯ ಸರಕಾರ ಕೊಟ್ಟ 5 ಗ್ಯಾರಂಟಿ ಯೋಜನೆಗಳ ಕುರಿತು ಹಾಗೂ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಪಂಚ ನ್ಯಾಯಗಳನ್ನು ಜಾರಿಗೆ ತರುವ ಬಗ್ಗೆ ಗ್ರಾಮೀಣ ಪ್ರದೇಶದ ಎಲ್ಲ ಮಹಿಳೆಯ–ರಿಗೆ, ಯುವಕರಲ್ಲಿ, ರೈತರಲ್ಲಿ ಜಾಗೃತಿಯನ್ನು ಮೂಡಿಸಿ ಕೇಂದ್ರ ಬಿಜೆಪಿ ಸರಕಾರದ ವೈಪಲ್ಯಗಳನ್ನು ಮನವರಿಕೆ ಮಾಡಿಕೊಟ್ಟು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾದ ಪ್ರೊ.ಎಚ್. ಆರ್. (ರಾಜು) ಆಲಗೂರ ರವರ ಗೆಲುವಿಗೆ ಹಿಂದುಳಿದ ವರ್ಗಗಳ ವತಿಯಿಂದ ಶ್ರಮಿಸಬೇಕೆಂದು ಕರೆ ನೀಡಿದರು.

ಸದರಿ ಸಭೆಯಲ್ಲಿ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಮಹಾಲಿಂಗ ಉಪ್ಪಾರ, ಸತೀಶ ಅಡವಿ, ಕಾರ್ಯದರ್ಶಿ ಶ್ರೀಶೈಲ ವಾಲಿಕಾರ, ಜಿಲ್ಲಾ ಸಮಿತಿ ಉಪಾಧ್ಯಕ್ಷರಾದ ಅಶೋಕ ಜೈನಾಪೂರ, ಪ್ರಧಾನ ಕಾರ್ಯದರ್ಶಿಗಳಾದ ದೇವೇಂದ್ರ ವಾಲಿಕಾರ, ಭೀಮರಾಯ ಸೀತಿಮನಿ, ಶಾಂತಪ್ಪ ಹೊಸಮನಿ, ಬೀರಪ್ಪ ಜುಮನಾಳ, ನಿಂಗಪ್ಪ ರೆಬಿನಾಳ, ಸುರೇಶ ಪೂಜಾರಿ ಮುಂತಾದವರು ಉಪಸ್ಥಿತರಿದ್ದರು.

## ಡಾ.ಬಾಬು ಜಗಜೀವನ ರಾಮ್ 117ನೇ ಜಯಂತಿ ಆಚರಣೆಯಲ್ಲಿ ಡಿಸಿ ಟಿ ಭೂ ಬಾಲನ್ ಅಭಿಮತ

# ಡಾ. ಬಾಬು ಜಗಜೀವನರಾಮ್ ರವರ ಕೊಡುಗೆ ಅನನ್ಯ

**ಉದಯರಶ್ಮಿ ನ್ಯೂಸ್**



ವಿಜಯಪುರ: ಭಾರತ ದೇಶದ ಅಭಿವೃದ್ಧಿ ಹಾಗೂ ಬೆಳವಣಿಗೆಗೆ ಪ್ರಮುಖ ಪಾತ್ರ ವಹಿಸಿದ ಡಾ.ಬಾಬು ಜಗಜೀವನರಾಮ್ ರವರು ಅನನ್ಯ ಕೊಡುಗೆಗಳನ್ನು ನೀಡಿದ್ದಾರೆ ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಹೇಳಿದರು.

ಶುಕ್ರವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಡಾ. ಬಾಬು ಜನಜೀವನರಾಮ್ ಅವರ 117 ನೇ ಜಯಂತಿ ಅಂಗವಾಗಿ ಭಾವಚಿತ್ರಕ್ಕೆ ಪುಷ್ಪ ನಮನ ಅರ್ಪಿಸಿ ಅವರು ಮಾತನಾಡಿ, ಭಾತದ ಪ್ರಥಮ ಕೃಷಿ ಸಚಿವರಾಗಿ ರೈತರ ಅಭಿವೃದ್ಧಿಗಾಗಿ ಮಹತ್ತರ ಬದಲಾವಣೆಗಳನ್ನು ತಂದು ದೇಶದಲ್ಲಿ ಹಸಿರು ಕ್ರಾಂತಿಯನ್ನೆ ಮಾಡಿದ ಮಹಾನ್ ನಾಯಕರಾಗಿ ಬೆಳೆದು ಬರುವುದರೊಂದಿಗೆ ರಕ್ಷಣಾ ಸಚಿವರಾಗಿ ಭಾರತ ಹಾಗೂ ಪಾಕಿಸ್ತಾನ ಯುದ್ಧ ಸಂದರ್ಭದಲ್ಲಿ ಯುದ್ಧದ ನೇತೃತ್ವವನ್ನು ವಹಿಸಿ ಯುದ್ಧದಲ್ಲಿ ಜಯಶಾಲಿಯಾಗಲು ಪ್ರಮುಖ ಪಾತ್ರ ವಹಿಸಿದ್ದರು ಅವರು ಸ್ವಾತಂತ್ರ ಹೋರಾಟಗಾರರಾಗಿ ಸಾಮಾಜಿಕ ನ್ಯಾಯದ ಹೋರಾಟಗಾರರಾಗಿ ದೇಶದ ಅಭಿವೃದ್ಧಿಗೆ ಶ್ರಮಿಸಿದ ಅವರ ಆದರ್ಶ ನಮಗೆ ಮಾದ–ರಿಯಾಗಿವೆ ಎಂದು ಅವರು ಹೇಳಿದರು.

ಜಿಲ್ಲಾ ಪಂಚಾಯತ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ಮಾತನಾಡಿ ಡಾ. ಬಾಬು ಜಗಜೀವನರಾಮ್ ಅವರ ಬಾಲ್ಯದ ಕಷ್ಟದ ದಿನಗಳಲ್ಲಿ ನಿರಂತರ ಛಲ ಬಿಡದೆ ವಿದ್ಯಾಭ್ಯಾಸ ಮಾಡುವುದರೊಂದಿಗೆ ಶಾಲಾ ದಿನಗಳಲ್ಲಿ ಹೋರಾಟದ ಮನೋಬಾವ ಬೆಳೆಸಿಕೊಂಡಿದ್ದರು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಜೈಲು ಶಿಕ್ಷೆಯನ್ನು ಅನುಭವಿಸಿದ ಅವರು ಸಾಮಾಜಿಕ ಕಳಕಳಿ ಜೊತೆಗೆ ರೈತರ ಕರಿತು ಅಪಾರ ಕಾಳಜಿ ಹೊಂದಿದ್ದರು ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ ಮಾತನಾಡಿ ಚುನಾವಣೆ ನೀತಿ ಸಂಹಿತೆ ಕಾರಣ ಡಾ.ಬಾಬು ಜಗಜೀವನರಾಮ್ ಜಯಂತಿ ಕಾರ್ಯಕ್ರಮವನ್ನು ಸರಳವಾಗಿ ಆಚರಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮಹನೀಯರ ಜಯಂತಿಗಳನ್ನು ಅಥ–ರ್ಪೂರ್ಣವಾಗಿ ಹಾಗೂ ಅದ್ದೂರಿಯಾಗಿ ಆಚರಿಸೋಣ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಮಹದೇವ ಮುರಗಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಪುಂಡಲೀಕ ಮಾನವರ, ಅಡಿವೆಪ್ಪ ಸಾಲಗಲ್ಲ, ಪರಸು ಚಲವಾದಿ, ಬೀಮರಾಯ ಜಿಗಜಿಣಗಿ, ದೇವೇಂದ್ರ ಮೀರೆಕರ, ವಿದ್ಯಾವತಿ ಅಂಕಲಗಿ, ಮುದಕಪ್ಪ ಕೊಟ್ಯಾಳ, ಚಿಕ್ಕಯ್ಯ ಮಂಚರ, ಹಾಜಿಲಾಲ ಕಬಾಡೆ, ಶ್ರೀನಿವಾಸ ಶಹಾಪುರ,ನಾಗರಾಜ ಕಬಾಡೆ, ತಬ್ಬಣ್ಣಾ ಹೊನ್ನಕಸ್ತೂರಿ, ಬಿ.ಎಸ್. ಗಸ್ತಿ, ದೇವೇಂದ್ರ ಕಬಾಡೆ, ದೇವೇಂದ್ರ ಹೊನ್ನಕಸ್ತೂರಿ, ಮತಿನ ಕುಮಾರ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ವಿಜಯಪುರ ಜಿಲ್ಲಾ ಬೀದಿ ಬದಿ ವ್ಯಾಪಾರಸ್ಥರ ಸಭೆ

**ಉದಯರಶ್ಮಿ ನ್ಯೂಸ್**



ವಿಜಯಪುರ: ವಿಜಯಪುರ ಜಿಲ್ಲಾ ಕಾಂಗ್ರೆಸ್ ಕಾರ್ಯಾಲಯದಲ್ಲಿ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲಾ ಬೀದಿಬದಿ ವ್ಯಾಪಾರಿಗಳ ವಿಭಾಗದ ಸಭೆಯನ್ನು ಆಯೋಜಿಸಲಾಗಿತ್ತು.

ಸಭೆಯ ಅಧ್ಯಕ್ಷತೆಯನ್ನು ಕೆಪಿಸಿಸಿ ಬೀದಿಬದಿ ವ್ಯಾಪಾರಿಗಳ ವಿಭಾಗದ ಅಧ್ಯಕ್ಷ ಡಾ.ಸಿ.ಇ. ರಂಗಸ್ವಾಮಿ ವಹಿಸಿ ಮಾತನಾಡಿ, ಕೇಂದ್ರದಲ್ಲಿ ಡಾ.ಮನಮೋಹನ ಸಿಂಗ್‌ರವರು ಪ್ರಧಾನಿಯಾಗಿದ್ದಾಗ ಬೀದಿಬದಿ ವ್ಯಾಪಾರಿಗಳ ಭದ್ರತೆಗೆ ಕಾನೂನನ್ನು ರೂಪಿಸಿರುವವರು. ಅದರಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬೀದಿಬದಿ ವ್ಯಾಪಾರಿಗಳಿಗೆ ಅವರು ವ್ಯಾಪಾರ ಮಾಡುವ ಸ್ಥಳದಲ್ಲಿ ಚಿಕ್ಕಮಳಿಗೆಗಳನ್ನು, ತಳ್ಳು ಗಾಡಿಗಳನ್ನು ನೀಡಲು ರೂ.20 ಕೋಟಿ ಅನುದಾನವನ್ನು ಕಾಯ್ದಿ–ರಿಸಿದ್ದಾರೆ. ಅದರಂತೆ ವಿಜಯಪುರ ಮಹಾನಗರಪಾಲಿಕೆಯಲ್ಲಿ ರೂ.1.00 ಕೋಟಿ ಅನುದಾನ ಮೀಸಲಿಡಲಾಗಿದೆ. ಇದರ ಸದುಪಯೋಗವನ್ನು ಬೀದಿಬದಿ ವ್ಯಾಪಾರಿಗಳು ಪಡೆದುಕೊಳ್ಳಬೇಕು. ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿಯಾದ ರಾಜು ಆಲಗೂರರವರ ಗೆಲುವಿಗೆ ತಮ್ಮ ಬಳಿ ಬರುವ ಗ್ರಾಹಕರ ಮನವೊಲಿಸಿ ಪ್ರಯತ್ನಿಸಬೇಕೆಂದು ಕರೆ ನೀಡಿದರು.

ರಾಜ್ಯ ಉಪಾಧ್ಯಕ್ಷ ಮಣಿಗೌಡ, ಜಿಲ್ಲಾ ಅಧ್ಯಕ್ಷ ಲಾಲಸಾಬ ಕೊರಬು, ಓಬಿಸಿ ಅಧ್ಯಕ್ಷ ಸಾಹೇಬಗೌಡ ಬಿರಾದಾರ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರಾದ ಸುಬಾಷ ಕಾಲೇಬಾಗ ಸಭೆಯಲ್ಲಿ ಮಾತನಾಡಿದರು.


ಸಭೆಯಲ್ಲಿ ಅಬ್ದುಲ್ ಸತ್ತಾರ ಬಾಗವಾನ, ಮೈಬೂಬ ವಾಟಿ, ರಮಜಾನ ಶೇಖ, ಅನೀಲ ಚವ್ಹಾಣ, ಮೈಬೂಬ ಜಾಗಿರದಾರ, ಜುಮ್ಮಣ್ಣ ತಾಳಿಕೋಟಿ, ಚಾಂದಸಾಬ ದೇಸಾಯಿ, ಶರಣಮ್ಮ ನಾಯಕ, ಸಿದ್ದು ಹಡಪದ, ವಿದ್ಯಾಶ್ರೀ, ಭಾಗ್ಯಶ್ರೀ, ಜಯರಾಬಿ ಚೌದರಿ, ಎಂ.ಎಂ. ಮುಲ್ಲಾ, ಫಿರೋಜ ಶೇಖ, ಸೋಮಣ್ಣ ತಳವಾರ, ಕೃಷ್ಣಾ ಲಮಾಣಿ, ಸಂತೋಷ ಬಾಲಗಾಂವಿ, ಮಹಾದೇವ ಜಾಧವ, ಎ.ಆರ್. ಕಂಬಾಗಿ, ಜಯಪ್ರಭು ಕೊಳಮಲಿ, ಭೀಮರಾಯ ಸೀತಿಮನಿ, ಮಹಾಲಿಂಗ ಕೆಂಗಲಗುತ್ತಿ, ರಮೇಶ ಪೂಜಾರಿ, ಶಾಂತವ್ವ ಹೊಸಮನಿ, ಅಬ್ದುಲ್‌ಪೀರಾ ಜಮಖಂಡಿ, ಬಸಪ್ಪ ಕೋಲಕಾರ ಮುಂತಾದವರು ಉಪಸ್ಥಿತರಿದ್ದರು.

**ಉದಯರಶ್ಮಿ ದಿನಪತ್ರಿಕೆ**

## ಕಾವ್ಯರಶ್ಮಿ

– ಪದ್ಮನಾಭ. ಡಿ.

("ನಮ್ಮ ಕಥಾ ಅರಮನೆ" ಬರಹಗಾರರು)



## ಸಂಜೆಮಲ್ಲಿಗೆ



ಅಂಗಳದ ತುಂಬೆಲ್ಲ ಬೆಳದಿಂಗಳು ಚೆಲ್ಲಿತ್ತು
ಬೀಸುವ ತಂಗಾಳಿ ಸವಿಗಂಪನು ಹರಡಿತ್ತು

ಬಳ್ಳಿಯಲಿ ಸಂಜೆಮಲ್ಲಿಗೆ ನನ್ನನು ಕರೆದಿತ್ತು
ಕಾದಿಹ ನಲ್ಲೆಯ ಮೊಗವ ನೆನಪು ಮಾಡಿತ್ತು
ತಂಗಾಳಿ ಬಲು ಹಿತವಾಗಿ ಆಲಾಪಿಸುತಲಿತ್ತು
ಒಲವಿನ ಸ್ವಾಗತ ಅವಳ ಕಣ್ಣುಗಳೇ ಕೋರಿತು

ಮಲ್ಲಿಗೆಗೆ ಮಲ್ಲಿಗೆಯ ದಂಡೆಯ ಮುಡಿಸಿದೆ ನಾ
ಹೊಸದೊಂದು ಅನುಭವವ ಬಾಳಲ್ಲಿ ಕಂಡೆ ನಾ
ಮೂಡಣದಿ ರವಿ ಬರಲು ಕೆಂಪಾಯಿತು ಆಗಸ
ನಾಚಿ ನಗಲು ನಲ್ಲೆ ಕುಡಿದಂತಾಯ್ತು ಪಾಯಸ

# ಏ.8 ರಿಂದ ಗುರುಚಕ್ರವರ್ತಿ ಸದಾಶಿವ ಜಾತ್ರಾ ಮಹೋತ್ಸವ

**ಉದಯರಶ್ಮಿ ನ್ಯೂಸ್**

ವಿಜಯಪುರ: ಇದೇ ಏ.8 ರಿಂದ 12 ರವರೆಗೆ ಕತಕನಹಳ್ಳಿ ಶ್ರೀ ಗುರುಚಕ್ರವರ್ತಿ ಸದಾಶಿವ ಜಾತ್ರಾ ಮಹೋತ್ಸವ ನಡೆಯಲಿದ್ದು, ದೇಶ ವಿದೇಶದಲ್ಲಿರುವ ಹಾಗೂ ಜಿಲ್ಲೆಯ ಸಮಸ್ತ ಭಕ್ತಾದಿಗಳು ಬಂದು ಯಾತ್ರೆಯಲ್ಲಿ ಸೇವೆ ಸಲ್ಲಿಸಿ ಸದಾಶಿವ ಆರ್ಶೀವಾದಕ್ಕೆ ಪಾತ್ರರಾಗಬೇಕು ಎಂದು ಕತಕನಹಳ್ಳಿ ಸದಾಶಿವ ಮಠದ ಪೀಠಾಧಿಪತಿ ಶಿವಯ್ಯ ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ಕತಕನಹಳ್ಳಿ ಗ್ರಾಮದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಶ್ರೀ ಸದಾಶಿವನ ಭಕ್ತರು ಪ್ರತಿ ವರ್ಷ ಜಾತ್ರೆ ಮಾಡಿಕೊಂಡು ಬಂದಿದ್ದಾರೆ. ಆದರೆ ಈ ವರ್ಷ ದಿ.ಮಠದ ಪರಂಪರೆಯನ್ನು ಸಾರುವ 'ಶ್ರೀ ಗುರುಚಕ್ರವರ್ತಿ ಸದಾಶಿವ ಶಿವಯೋಗಿ ಸಿದ್ಧರಾಮೇಶ್ವರ ಲೀಲಾಮೃತ' ಗ್ರಂಥ ಲೋಕಾರ್ಪಣೆಯಾಗಲಿದೆ. ಹಾಗಾಗಿ ಇದೊಂದು ಅತ್ಯಂತ ವಿಶೇಷವಾದ ಜಾತ್ರೆಯಾಗಿ ಭಕ್ತರ ಮನದಲ್ಲಿ ಉಳಿಯಲಿದೆ ಎಂದು ಹೇಳಿದರು.

ಬಬಲಾದಿ ಪರಂಪರೆಯಲ್ಲಿ ಹಿಂದಿನ ಮಠಾದೀಶರು ಯಾರೂ ಹಸಿರು ಪಟಕಾ ಸುತ್ತಿರಲಿಲ್ಲ. ಅದನ್ನು ಸುತ್ತಿದ ಮೊದಲ ವ್ಯಕ್ತಿಯೇ ನಾನು. ಎಲ್ಲ ಬಣ್ಣದ ಪಟಕಾ ಸುತ್ತುತ್ತೇನೆ, ವಿಷಯ ಅದಲ್ಲ, ಕೇವಲ ಪಟಕಾ ಸುತ್ತಿ ಮಠಾದೀಶನಾಗುವುದಕ್ಕಿಂತ ಸತ್ಯ ಹಾಗೂ ಶುದ್ಧ ನಡೆಯಿಂದ ಮಠಾದೀಶನಾಗಬೇಕು. ಸಮಾಜ–ಕ್ಕೆ ಎರಡು ಕೈಗಳಿಂದ ಯಾರು ಸೇವೆ ಮಾಡುತ್ತಾರೋ ಅಂಥ–'ವರಿಗೆ ಬಬಲಾದಿ ಅಪ್ಪಾವರು ಸಾವಿರ ಕೈಗಳಿಂದ ಸಿರಿ ಸಂಪತ್ತನ್ನು ನೀಡುತ್ತಾರೆ. ಹಾಗಾಗಿ ಸೇವೆಯನ್ನು ನಮ್ಮ ಜೀವನದ ಭಾಗವಾಗಿಸಿಕೊಳ್ಳಬೇಕು ಎಂದರು.

ಯಾತ್ರಾ ಅಂಗವಾಗಿ ಸಾಮೂಹಿಕ ವಿವಾಹ, ಪುರಾಣ ಪ್ರವಚನ, ಕುಸ್ತಿ, ಭಾರ ಎತ್ತುವುದು ಸೇರಿದಂತೆ ಅನೇಕ ಕಾರ್ಯಕ್ರಮಗಳು 5 ದಿನಗಳ ಕಾಲ ವಿಜೃಂಭಣೆಯಿಂದ ಜರುಗಲಿವೆ. ಪ್ರತಿ ವರ್ಷದಂತೆ ಮಠದ ಯಾತ್ರೆಯಲ್ಲಿ ಅಖಂಡ ದಾಸೋಹ ಇರಲಿದ್ದು, ಭಕ್ತರು ತಾವೇ ಮಾಡಿ, ಇತರರಿಗೂ ಉಣಬಡಿಸಬೇಕು ಎಂದು ಹೇಳಿದರು.

ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಮಾತನಾಡಿ, ದಿ.8 ರಂದು ಬೆಳಿಗ್ಗೆ ಜಾನುವಾರು ಜಾತ್ರೆಯನ್ನು ಪೂಜ್ಯ ಶಿವಯ್ಯ ಮಹಾಸ್ವಾಮಿಗಳು ಉದ್ಘಾಟನೆ ಮಾಡಲಿದ್ದಾರೆ. 10.30 ಗಂಟೆಗೆ ಕೃಷಿ ಮೇಳ, ಮಧ್ಯಾಹ್ನ 4 ಗಂಟೆಗೆ ಕೆಸರಿನಲ್ಲಿ ಮನುಷ್ಯರ ಓಟ, ಸಂಜೆ 7 ಗಂಟೆಗೆ ಜ್ಞಾನ ದೀಪೋತ್ಸವ ನಡೆಯಲಿದೆ. ದಿ.9 ರಂದು ಬೆಳಿಗ್ಗೆ ಕತ್ರಿ ಗದ್ದುಗೆಗೆ ರುದ್ರಾಭೀಷೇಲ ಹಾಗೂ ಸಕಲ ವಾದ್ಯಗಳೊಂದಿಗೆ ಕುಂಭಾಭೀಷೇಕ, 10.30ಕ್ಕೆ ರಸಪ್ರಶ್ನೆ ಸಂಜೆ 7 ಗಂಟೆಗೆ ಶ್ರೀ ಶ್ರೀಶೈಲ ಹಿರೇಮಠ ಅವರಿಂದ ಬಬಲಾದಿ ಮಹಾತ್ಮರ ಪುರಾಣ ಪ್ರವಚನ ಮಂಗಲ ಕಾರ್ಯಕ್ರಮ ಜರುಗಲಿದೆ ವಿಶೇಷವಾಗಿ ಗ್ರಂಥ ಮೆರವಣಿಗೆ ವೇಳೆಯಲ್ಲಿ ಹೆಲಿಕ್ಯಾಪ್ಟರ್ ಮೂಲಕ ಪುಷ್ಪಾರ್ಚನೆ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಮಧುವನ ಮಾಲಿಕ ಬಾಬುಗೌಡ ಬಿರಾದಾರ ಮಾತನಾಡಿ, ಬಬಲಾದಿ ಸದಾಶಿವ ಮಠಕ್ಕೂ ಹಾಗೂ ಕತಕನಹಳ್ಳಿ ಮಠಕ್ಕೂ ಇರುವ ಸಂಬಂಧವನ್ನು ಗ್ರಂಥ ರೂಪದಲ್ಲಿ ಹೊರತರಲಾಗುತ್ತಿದೆ. 12 ವರ್ಷಗಳಿಂದ ಮಾಹಿತಿ ಸಂಗ್ರಹ ಮಾಡುತ್ತಿದ್ದೇವು. ಮಿರಜ್, ಪುಣೆ ಸೇರಿದಂತೆ ವಿವಿದೆಡೆ ದಾಖಲೆಗಳನ್ನು ಹುಡುಕಿದೆವು ಇತಿಹಾಸ ತಜ್ಞ–ರಿಂದ ಮಾಹಿತಿ ತೆಗೆದುಕೊಂಡು ವಿಜಯಪುರದಲ್ಲಿಯೇ ದಾಖಲೆ ಹುಡುಕಿ ಸಧ್ಯ ಗ್ರಂಥರೂಪದಲ್ಲಿ ಹೊರತರಲಾಗುತ್ತಿದೆ ಎಂದು ಹೇಳಿದರು.

ವಿಜಯಪುರದ ಉದ್ಯಮಿ ರಾಜು ಗುಡ್ಡೊಡಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಗ್ರಂಥ ಕತೃ ವೇಧ ಮೂರ್ತಿ ಶ್ರೀಶೈಲ ಸ್ವಾಮಿಜಿ, ವಿಜಯ ಜೋಶಿ ಉಪಸ್ಥಿತರಿದ್ದರು.

# ಊರ್ಮಿಳಾ



## ಭಾವರಶ್ಮಿ

– ಪುಷ್ಪಾ.ರಾಠೋಡ

("ನಮ್ಮ ಕಥಾ ಅರಮನೆ" ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**

ನಿನ್ನಾಗಮನಕ್ಕಾಗಿಯೇ ಕಾದಿರುವೆ ಎಂದು ಮನಸ್ಸು ಕೂಗಿ ಹೇಳಿದರು, ಕೇಳದಷ್ಟು ಕರ್ತವ್ಯ ನಿರತನವನು. ರಾಜ ವೈಭೋಗಗಳ ನಡುವೆಯೂ ಅವನ ಆಗಮನಕ್ಕೆ ಕಾಯುತ್ತಾ ತಪಸ್ವಿನಿಯಂತೆ ಕಾಲ ಕಳೆದವಳವಳು.

ರಾಮಾಯಣ ಎಂದೊಡನೆ ಕಣ್ಣೆದುರು ಬರುವ ಪಾತ್ರಗಳು, ದಶರಥ, ಕೌಸಲ್ಯೆ, ಕೈಕೇಯೀ, ರಾಮ, ಸೀತೆ, ಲಕ್ಷಣ ಮತ್ತವರ ತ್ಯಾಗಗಳು. ಮರೆತುಹೋದ ಪಾತ್ರವೊಂದು ಯಾರು ಸ್ಮೃತಿಯ ಪಟಲದಲ್ಲೂ ಸುಳಿಯದೇ ಹೋಗುತ್ತದೆ.

ಊರ್ಮಿಳೆ............

ಊರ್ಮಿಳೆ ಲಕ್ಷಣನ ಸತಿ, ಜನಕ ರಾಜನ ಮಗಳು ಜಾನಕಿ. ಆದರೆ ಈ ಹೆಸರಿನಿಂದ ಪ್ರಸಿದ್ಧಳಾದವಳು ಜನಕ ರಾಜನ ಸಾಕು ಮಗಳು ಸೀತೆ. ಶ್ರೀರಾಮ ಮತ್ತು ಸೀತಾಮಾತೆಯರು ವನವಾಸಕ್ಕೆಂದು ಹೊರಟಾಗ ಲಕ್ಷ್ಮಣನು ಅವರನ್ನೇ ಅನುಸ–ರಿಸುತ್ತಾನೆ. ಊರ್ಮಿಳೆಯು ತಾನು ಜೊತೆಗೆ ಬರುವೆನೆಂದು ಹೇಳಿದಾಗ, ಅವಳು ಎಂತಹ ದು:ಖದ ಸಮಯದಲ್ಲೂ ಕಣ್ಣೀರು ಹಾಕದೆ ಇರುವುದು ಹಾಗೂ ತನ್ನ ವೃದ್ಧ ತಂದೆ ತಾಯಿಯರ ಜವಾಬ್ದಾ–ರಿಯನ್ನು ವಹಿಸಿ ಹೊರಡುತ್ತಾನೆ.

ಊರ್ಮಿಳೆಯ ಸ್ವಗತ

"ನಿನ್ನ ನೆನಪುಗಳ ದಾಳಿಗೆ ಅದೆಷ್ಟೋ ರಾತ್ರಿಗಳಾದವು ಈ ಕಣ್ಣುಗಳು ನಿದ್ರೆಯ ಮರೆತು,ವಿರಹ ವೇದನೆಯಲ್ಲಿ ಬಳಲುವ ಜೀವಕೆ ನೀ ನಿದಿರೆಯ ವರದಾನ ನೀಡಿ ಒಳ್ಳೆಯದೇ ಆಯ್ತು."

ಹೀಗೆಂದು ಮನದಲ್ಲೇ ಎಷ್ಟು ನೊಂದಿತ್ತೋ ಆ ಜೀವ. ಯಾವ ಐಹಿಕ ಸುಖ ಭೋಗಗಳಿಲ್ಲದಿದ್ದರೂ ಸರಿಯೇ ತನ್ನ ಅಕ್ಕ ಸೀತಾ ದೇವಿ ತನ್ನ ಪತಿಯ ಜೊತೆಗಿದ್ದಾಳೆ. ಆದ–'ರೆ ನಾನು ಎಲ್ಲವೂ ಇದ್ದು ಏನು ಇಲ್ಲದಂತೆ ಜೀವನ ಸಾಗಿಸಬೇಕಿದೆ ಎಂದು ಸ್ವಲ್ಪವೂ ದು:ಖಿಸದೆ ತನ್ನ ಪತಿ ವಹಿಸಿದ ಕಾರ್ಯಭಾರವನ್ನು ಕಟ್ಟುನಿಟ್ಟಾಗಿ ನಿರ್ವಹಿಸುತ್ತಿದ್ದಳು.

ಶ್ರೀ ರಾಮಸೀತೆಯ ರಕ್ಷಣಾ ಕಾರ್ಯದಲ್ಲಿ ನಿರತನಾದ ಲಕ್ಷ್ಮಣಿನಿಗೆ, ಎಲ್ಲಿ ತನ್ನ ನಿದ್ರೆಯ ಅವಸ್ಥೆಯಿಂದ ತನ್ನ ಕಾರ್ಯದಲ್ಲಿ ತೊಡಕುಂಟಾಗುವುದೋ ಎಂದು ತಿಳಿದು ನಿದಿರಾ ದೇವಿಯಲ್ಲಿ, ತನಗೆ ನಿದ್ರೆಯೇ ಬಾರದಂತೆ ವರದಾನ ನೀಡಲು ಕೇಳಿಕೊಂಡಾಗ, ನಿದ್ರಾ ದೇವಿ ದಣಿದ ಶರೀರಕ್ಕೆ ನಿದಿರೆಯ ಅವಶ್ಯಕತೆ ಇರುವುದ–ರಿಂದ ಈ ವರದಾನವನ್ನು ನಾನು ನೀಡಲಾಗದು ಎನ್ನುತ್ತಾಳೆ. ಇದಕ್ಕೆ ಪರ್ಯಾಯವಾಗಿ ಏನಾದರೂ ಸಲಹೆ ಇದ್ದರೆ ತಿಳಿಸಲು ಲಕ್ಷ್ಮಣ ಕೇಳಿದಾಗ, ನಿನ್ನ ನಿದ್ರೆಯನ್ನು ಬೇರೆ ಯಾರಿಗಾದರೂ ನೀಡಬಹುದು ಎಂದು ನಿದ್ರಾ ದೇವಿ ತಿಳಿಸಲು, ತಾನು




ವನವಾಸ ಮುಗಿಸಿ ಬರುವವರೆಗೂ ತನ್ನ ನಿದ್ರೆಯನ್ನೆಲ್ಲ ತನ್ನ ಮಡದಿಗೆ ನೀಡಲು ಕೇಳಿಕೊಳ್ಳುತ್ತಾನೆ. ಇತ್ತ ನಿದ್ರಾ ದೇವಿ ಊರ್ಮಿಳೆಗೆ ಅವಳ ಪತಿಯು ತನ್ನ ನಿದ್ರೆಯನ್ನೆಲ್ಲಾ ನಿನಗೆ ನೀಡಲು ತಿಳಿಸಿದಾಗ, ಊರ್ಮಿಳೆ ತನ್ನ ಪತಿಯ ಪಾಲಿನ ನಿದ್ರೆಯನ್ನು ಸ್ವೀಕರಿಸುತ್ತಾಳೆ.

ಕವಿ ರವೀಂದ್ರರು ಕಾವ್ಯದ ಅನಾದರ ಎಂಬ ತಮ್ಮದೊಂದು ವಿಮರ್ಶೆಯಲ್ಲಿ ಊರ್ಮಿಳೆಯ ಬಗೆಗೆ ಸಹಾನುಭೂತಿಯಿಂದ ಹೇಳಿದಂತೆ, ಉಷೋದಯದ ಪೂರ್ವದಿಗಂತದಲ್ಲಿ ಮೂಡುವ ತಾರೆಯು ಸೂರ್ಯೋದಯಾನಂತರದ ತುಂಬು ಬೆಳಕಿನಲ್ಲಿ ಮುಳುಗಿ ಹೋಗುವಂತೆ, ಸೀತಾದೇವಿಯ ಕಣ್ಣೀರಿನಲ್ಲಿ ಊರ್ಮಿಳಾ ದೇವಿ ಸಂಪೂರ್ಣ ಕೊಚ್ಚಿ ಹೋದರೆಂದು ನಿಟ್ಟುಸಿರಿಟ್ಟಿದ್ದಾರೆ.

ದಶರಥ ಮಹಾರಾಜರು ತೀರಿಹೋದಾಗಲೂ ಊರ್ಮಿಳೆ ಲಕ್ಷ್ಮಣನಿಗೆ ಕೊಟ್ಟು ಮಾತಿನಂತೆ ಎಷ್ಟೇ ದುಃಖವಾದರೂ ಕಣ್ಣೀರನ್ನು ಸುರಿಸಲಿಲ್ಲ.

ಎಲ್ಲ ಐಹಿಕ ಸುಖವನ್ನು ತೊರೆದು, ರೂಪದಲ್ಲಿ ಸೌಂದರ್ಯದ ಖಣಿಯಂತಿದ್ದ ಮುಖವು ಕಳೆಗುಂದಿ ಹೋಗಿ–ತ್ತು. ಶ್ರೀ ರಾಮಸೀತೆ ಲಕ್ಷ್ಮಣನು ವನವಾಸದಿಂದ ಹಿಂತಿರುಗಿದಾಗ, ಲಕ್ಷ್ಮಣ ಊರ್ಮಿಳೆಯನ್ನು ಊಹಿಸದ ಅವಸ್ಥೆಯಲ್ಲಿ ಕಂಡಾಗ ಕೊಂಚ ಕುಪಿತಗೊಂಡನು. ತದನಂತರ ತನ್ನ ವರದಾನದ ನೆನಪಾಗಿ, ಅದನ್ನು ಹಿಂದೆ ಪಡೆಯುತ್ತಾನೆ. ಲಕ್ಷ್ಮಣ ಹಿಂದಿರುಗಿದೊಡನೆ ತನ್ನೆಲ್ಲ ದುಃಖವನ್ನು ಹೊರಹಾಕಿ ಕಣ್ಣೀರ ಸಾಗರವಾದಳು ಊರ್ಮಿಳೆ. ಲಕ್ಷ್ಮಣ ಮತ್ತು ಊರ್ಮಿಳೆಗೆ ಇಬ್ಬರು ಮಕ್ಕಳಾಗುತ್ತಾರೆ ಅಂಗದ ಮತ್ತು ಚಂದ್ರಖೇತು.

ಒಂದು ಕಥೆಯ ಪ್ರಕಾರ ಊರ್ಮಿಳೆ ಲಕ್ಷ್ಮಣನ ಆಗಮನಕ್ಕೆ ಬಿಸಿನೀರು ಹಿಡಿದು ಬಾಗಿಲ ಬಳಿ ನಿಂತಿರುತ್ತಾಳೆ.ವನವಾಸದ ವಿಷಯ ತಿಳಿದು ಅವರು ಹಿಂತಿ–ರುಗುವವರೆಗೂ ಅಲ್ಲಿಯೇ ಅವನ



ಆಗಮನಕ್ಕಾಗಿ ಕಾಯುತ್ತಾಳೆ. ಇನ್ನೊಂದು ಕಥೆಯ ಪ್ರಕಾರ ವನವಾಸದ ವಿಷಯ ತಿಳಿದಾಗ ಊರ್ಮಿಳೆ ಸ್ನಾನ ಮಾಡುತ್ತಿರುತ್ತಾಳೆ ಹಾಗೇ ಲಕ್ಷ್ಮಣ ಹಿಂದಿರುಗುವವರೆಗೂ ಅಲ್ಲಿಯೇ ಒದ್ದೆ ಮಡಿಯಲ್ಲಿ ರುತ್ತಾಳೆ ಎಂದು ಹೇಳುತ್ತಾರೆ.

ಭೂಮಿಯ ಮೇಲೆ ಲಕ್ಷ್ಮಣನ ಅವಧಿ ಮುಗಿಯುತ್ತಿರುವಾಗ ಶ್ರೀ ರಾಮನ ಹೇಳಿಕೆಯಂತೆ ಸಾಗರದ ಮೂಲಕ ಸಾಗಿ ದೇಹ ತ್ಯಜಿಸುವ ವಿಷಯ ತಿಳಿದಾಗ, ಊರ್ಮಿಳೆಯು ಅದೇ ಸಾಗರದ ದಡದಲ್ಲಿ ಗಂಧದ ಚಿತೆಯೇರಿ ಪ್ರಾಣ ತ್ಯಜಿಸಿ ಮುತ್ತೈದೆ ಸಾವನ್ನು ಪಡೆಯುತ್ತಾಳೆ.ಇದನ್ನು ತಿಳಿದ ಮೇಲೆ ಲಕ್ಷ್ಮಣ ಸಾಗರದ ಮೂಲಕ ತನ್ನ ದೇಹ ತ್ಯಜಿಸುತ್ತಾನೆ.

ಬದುಕಿನುದ್ದಕ್ಕೂ ಎಲ್ಲ ಜಂಜಡಗಳ ಎದುರಿಸಿ ತಾಳ್ಮೆ ಕಳೆದುಕೊಳ್ಳದೇ ಉಳಿದ ಊರ್ಮಿಳಾ ದೇವಿ ವಾಸ್ತವವಾಗಿಯೂ ಮಹಾನ್ ತಪಸ್ವಿನಿಯಾಗಿ, ದೇವತಾ ಪ್ರತಿಮೆಯಂತೆ ಗೋಚರಿಸದೆ ಇರಳು.

### ಮಂಗಲ ಮಂಟಪ ಲೋಕಾರ್ಪಣೆ । ಅಮೃತಶಿಲಾಮೂರ್ತಿ ಪ್ರತಿಷ್ಠಾಪನೆ । ಶ್ರೀ ಗುರುಮರುಳಾರಾಧ್ಯ ಸಿರಿ ಪ್ರಶಸ್ತಿ ಪ್ರದಾನ

# ಮಾನವ ಕಲ್ಯಾಣವೇ ವೀರಶೈವ ಪರಂಪರೆ ಮೂಲಮಂತ್ರ :ಉಜ್ಜಯಿನಿ ಶ್ರೀ

ಉದಯರಶ್ಮಿ ನ್ಯೂಸ್

ಕಲಕೇರಿ: ಭಾರತೀಯ ಸನಾತನ ಧರ್ಮದಲ್ಲಿ ಪುರಾತನವಾದದ್ದು ವೀರಶೈವ ಪರಂಪರೆಯಾಗಿದ್ದು, ಹಿಂದಿನ ಅನೇಕ ನಾಗರೀಕತೆಗಳನ್ನು ಅಧ್ಯಯನ ಮಾಡಿದಾಗ ವೀರಶೈವ ಧರ್ಮ ಅಸ್ಥಿತ್ವದಲ್ಲಿರುವುದು ಕಂಡು ಬರುತ್ತದೆ ಈ ಹಿನ್ನೆಲೆಯಲ್ಲಿ ಜಾನ್ ಮಾರ್ಷಲ್ ಅಧ್ಯಯನದ ಪ್ರಕಾರ ಹರಪ್ಪ ಮತ್ತು ಮೆಹೆಂಜೋದಾರೋ ನಾಗರೀಕತೆಯ ಉತ್ಖನನದ ವೇಳೆ ಲಿಂಗಾಯತರು ಧರಿಸುವ ಲಿಂಗಗಳು ಸಿಕ್ಕಿರುವುದು ಇದಕ್ಕೆ ಸಾಕ್ಷಿಯಾಗಿದೆ ಎಂದು ಉಜ್ಜಯಿನಿ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಗ್ರಾಮದ ಗುರುಮರುಳಾರಾಧ್ಯರ ಹಿರೇಮಠದಲ್ಲಿ ಗುರುವಾರ ಸಂಜೆ ನಡೆದ ಮಹಾಶಿವಶರಣೆ ಸಜ್ಜಲಗುಡ್ಡದ ಶರಣಮ್ಮ ತಾಯಿಯ ಪುರಾಣ ಮುಕ್ತಾಯ ಮತ್ತು ಧರ್ಮಸಭೆ ಹಾಗೂ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಅವರು



ಮಾತನಾಡಿದರು.

ವೀರಶೈವ ಪರಂಪರೆಯಲ್ಲಿ ಪಂಚಪೀಠಗಳ ಮೂಲಕ ಶತಶತಮಾನಗಳಿಂದಲೂ ನಾಡಿನಾದ್ಯಂತ ಶಾಖಾ ಮಠಗಳನ್ನು ಸ್ಥಾಪಿಸಿ, ಅಲ್ಲಿ ಮಠಾಧೀಶರನ್ನು ನೇಮಿಸಿ ಅವರ ಮೂಲಕ ಭಕ್ತರಿಗೆ ಅನ್ನ, ಅರಿವೆ, ಶಿಕ್ಷಣ ಸಂಸ್ಕಾರ ನೀಡಿ ಸಮಾಜದಲ್ಲಿ ಪ್ರಬುದ್ಧ ನಾಗರೀಕರಾಗುವಂತೆ ಮಾಡಿದ ಕೀರ್ತಿ ವೀರಶೈವ ಧರ್ಮಕ್ಕೆ ಸಲ್ಲುತ್ತದೆ ಎಂದರು.

ಪ್ರಸವಪೂರ್ವದಲ್ಲಿಯೇ ಅಂದರೆ ತಾಯಿ ಗರ್ಭವತಿ ಇರುವಾಗಲೇ ಸಂಸ್ಕಾರ ನೀಡುವ ಏಕೈಕ ಧರ್ಮ ಯಾವುದಾದರೂ ಇದ್ದರೆ ಅದು ವೀರಶೈವ ಧರ್ಮವಾಗಿದ್ದು, ಜಗತ್ತಿಗೆ ಒಳಿತಾಗುವ ನಿಟ್ಟಿನಲ್ಲಿ ಮಾನವ ಕಲ್ಯಾಣದ ಗುರಿಯನ್ನು ಹೊಂದಿದ ಮತ್ತು ಹೆಣ್ಣು–ಗಂಡು, ಜಾತಿ–ಮತ ಭೇದಭಾವವನ್ನು ಎಣಿಸದ ಸರ್ವರಲ್ಲೂ ಸಮಾನತೆಯನ್ನು ಕಾಣುವ, ಕಿಂಕರನನ್ನು ಶಂಕರನನ್ನಾಗಿಸುವ ಶಕ್ತಿ ವೀರಶೈವ ಧರ್ಮದಲ್ಲಿದೆ ಎಂದರು.

ಅಂಗದ ಮೇಲೆ ಲಿಂಗಧಾರಣೆ, ಹಣೆಯ ಮೇಲೆ ವಿಭೂತಿ ಧಾರಣೆ ಮಾಡಿದವರೆಲ್ಲ ಲಿಂಗಾಯತರು ಎನಿಸಿಕೊಳ್ಳಲು ಸಾಧ್ಯವಿಲ್ಲ ಅವರು ಲಿಂಗಪೂಜಾನಿಷ್ಠರಾಗಿ, ಷಟ್‌ಸ್ಥಲಗಳನ್ನು ಅರಿತು ಅಷ್ಟಾವರಣಗಳನ್ನು ಪಾಲಿಸಿ ಕಾಯಾ, ವಾಚಾ, ಮನಸಾ ಧರ್ಮಾಚರಣೆ ಮಾಡಿದಾಗ ಮಾತ್ರ ನಿಜವಾದ ವೀರಶೈವ ಲಿಂಗಾಯತ ಧರ್ಮವಂತರು ಎನಿಸಿಕೊಳ್ಳಲು ಸಾಧ್ಯ ಎಂದು ಹೇಳಿದ ಅವರು ಕಲಕೇರಿಯ ಗುರುಮರುಳಾರಾಧ್ಯರ ಹಿರೇಮಠಕ್ಕೆ ಶತಶತಮಾನಗಳ ಇತಿಹಾಸವಿದ್ದು ಮಹಾದಾಸೋಹಿ ಕಲಬುರ್ಗಿಯ ಶರಣಬಸಪ್ಪನಿಗೆ, ಕಡಕೋಳದ ಮಡಿವಾಳಪ್ಪನಿಗೆ ದೀಕ್ಷೆ ಕೊಟ್ಟು ಸಮಾನತೆ ಸಾರಿದ, ಮಾನವ ಕಲ್ಯಾಣಗೈದ ಕೀರ್ತಿ ಕಲಕೇರಿ ಹಿರೇಮಠದ ಗುರುಪರಂಪರೆಗೆ ಸಲ್ಲುತ್ತದೆ ಎಂದರು.

ಕಲಕೇರಿ ಹಿರೇಮಠದ ಸಿದ್ದರಾಮ ಶಿವಾಚಾರ್ಯರು, ವೀರಗೋಟದ ಅಡವಿಲಿಂಗ ಮಹಾರಾಜರು, ಗುಳಬಾಳ ರಾಮಲಿಂಗೇಶ್ವರಮಠದ ಮರಿಹುಚ್ಚೇಶ್ವರ ಶ್ರೀಗಳು, ಮಾಜಿ ಶಾಸಕರಾದ ಸೋಮನಗೌಡ ಪಾಟೀಲ ಸಾಸನೂರ, ರಾಮನಗೌಡ ವಣಕ್ಯಾಳ, ಶಾಂತಗೌಡ ಬಿ. ಪಾಟೀಲ ಮಾತನಾಡಿದರು.

ಇದೇ ವೇಳೆ ಉಜ್ಜಯಿನಿ ಪೀಠದ ಜಾತ್ರಾ ಮಹೋತ್ಸವದ ವಾಲ್‌ಪೋಸ್ಟರ್‌ನ್ನು ಪೂಜ್ಯರ ಸಮ್ಮುಖದಲ್ಲಿ ಬಿಡುಗಡೆಗೊಳಿಸಲಾಯಿತು. ಸುಮಾರು 20ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಕಲಕೇರಿ ಶ್ರೀಮಠದ ಪರವಾಗಿ "ಶ್ರೀ ಗುರುಮರುಳಾರಾಧ್ಯ ಸಿರಿ" ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಜಾನಪದ ಲೋಕದ ಹಿರಿಯ ಕಲಾವಿದ ಗುರುರಾಜ ಹೊಸಕೋಟಿ ಮತ್ತು ಅವರ ತಂಡದವರಿಂದ ಜಾನಪದ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಶುಕ್ರವಾರ ಉಜ್ಜಯಿನಿ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದಂಗಳವರಿಂದ ಶ್ರೀಮಠದ ನೂತನ ಮಂಗಲ ಮಂಟಪ ಲೋಕಾರ್ಪಣೆ



ಮತ್ತು ಗುರುಮರುಳಾರಾಧ್ಯರ ಅಮೃತಶಿಲಾಮೂರ್ತಿ ಪ್ರತಿಷ್ಠಾಪನೆ ನೆರವೇರಿತು ನಂತರ ಕಲಬುರಗಿ ಶರಣಬಸವ ವಿಶ್ವವಿದ್ಯಾಲಯ ಚೇರಪರ್ಸನ್ ಆಗಿರುವ ಡಾ.ದಾಕ್ಷಾಯಿಣಿ ಎಸ್.ಅಪ್ಪ ಅವರ ನೇತೃತ್ವದಲ್ಲಿ 1008 ಮುತ್ತೈದೆಯರಿಗೆ ಉಡಿತುಂಬುವ ಕಾರ್ಯ ನಡೆಯಿತು ಮತ್ತು ಶ್ರೀಮಠದಲ್ಲಿ ಭಕ್ತರಿಗೆ ಏರ್ಪಡಿಸಿರುವ ಅನ್ನದಾಸೋಹದಲ್ಲಿ ಪ್ರಸಾದ ಸೇವಿಸಿ ಭಕ್ತರು ಪುನೀತಭಾವ ವ್ಯಕ್ತಪಡಿಸಿದರು.

ಜಳಕೋಟದ ಶಿವಾನಂದ ಶ್ರೀಗಳು, ಗದ್ದುಗೆಮಠದ ಗುರುಮಡಿವಾಳೇಶ್ವರ ಶ್ರೀಗಳು, ಹಲಕರ್ಟಿ ಹಿರೇಮಠದ ಅಭಿನವ ಮುನೀಂದ್ರ ಶ್ರೀಗಳು, ನಾವದಗಿ ಬೃಹನ್ಮಠದ ರಾಜಗುರು ರಾಜೇಂದ್ರ ಒಡೆಯರ್ ಶ್ರೀಗಳು, ವಿಹೆಚ್‌ಪಿ ಕರ್ನಾಟಕ ಉತ್ತರ ಪ್ರಾಂತದ ಅಧ್ಯಕ್ಷ ಲಿಂಗರಾಜಪ್ಪ ಅಪ್ಪ, ಸಜ್ಜಲಗುಡ್ಡ ಕಂಬಳಿಹಾಳದ ದೊಡ್ಡಬಸವಾಚಾರ್ಯ ತಾತನವರು, ರಾಷ್ಟ್ರೀಯ ಬೇಡಜಂಗಮ ಸಮಾಜದ ಗೌರವಾಧ್ಯಕ್ಷ ಚಬನೂರ ಹಿರೇಮಠದ ರಾಮಲಿಂಗಯ್ಯ ಸ್ವಾಮಿಗಳು, ನೀಲೂರ ಹಿರೇಮಠದ ಶರಣಯ್ಯ ಸ್ವಾಮಿಗಳು, ಬಳೂಟಗಿ ಹಿರೇಮಠದ ಸಿದ್ಧೇಶ್ವರ ಶಾಸ್ತ್ರಿಗಳು, ಗವಾಯಿಗಳಾದ ಸಂಗಮೇಶ ನೀಲಾ ಮತ್ತು ಮಹಾಂತೇಶ ಕಾಳಗಿ ಸೇರಿದಂತೆ ಶಾಸಕ ರಾಜುಗೌಡ ಪಾಟೀಲ ಕುದರಿಸಾಲೊಡಗಿ, ಸಂಗನಗೌಡ ಬಿರಾದಾರ, ಘನಮಠೇಶ್ವರ ಶಿಕ್ಷಣ ಸಂಸ್ಥೆಯ ಚೇರಮನ್ ಶಿವಶರಣ ಎಮ್.ಸಜ್ಜನ, ಎಬಿಡಿ ಫೌಂಡೇಶನ್‌ನ ಸಂತೋಷ ದೊಡಮನಿ, ಪ್ರಭುಗೌಡ ಬಿರಾದಾರ ಅಸ್ಕಿ, ಸಿದ್ದು ಬುಳ್ಳಾ, ವೀರೇಶ ನಾಡಗೌಡ್ರು, ಜಯಶ್ರೀ ಬೆಣ್ಣಿ, ಸಾವಿತ್ರಿ ಡೋಣಿಯವರ ಸೇರಿದಂತೆ ಇತರರು ಇದ್ದರು.

---

# ಚಿಂತಿಸುವುದು ಬಿಡಿ, ಖುಷಿಯಾಗಿರುವುದು ಕಲಿಯಿರಿ :ಡೇಲ್ ಕಾರ್ನೆಗಿ

ಉದಯರಶ್ಮಿ ದಿನಪತ್ರಿಕೆ


**ವೀಣಾಂತರಂಗ**



–ವೀಣಾ ಎಚ್. ಪಾಟೀಲ್, ಮುಂಡರಗಿ

1948ರಲ್ಲಿ ಖ್ಯಾತ ಪಾಶ್ಚಾತ್ಯ ಸಾಹಿತಿ ಡೇಲ್ ಕಾರ್ನೆಗಿ ಬರೆದ ಪುಸ್ತಕ ಹೌ ಟು ಸ್ಟಾಪ್ ವರಿಯಿಂಗ್ ಅಂಡ್ ಸ್ಟಾರ್ಟ್ ಲಿವಿಂಗ್ ಜಗತ್ತಿನ ಸುಮಾರು 30 ಭಾಷೆಗಳಿಗೆ ತರ್ಜುಮೆಗೊಂಡಿದೆ ಮತ್ತು ಸುಮಾರು ಹದಿನೈದು ಮಿಲಿಯನ್ ಪ್ರತಿಗಳು ಮಾರಾಟವಾಗಿವೆ ಎಂದರೆ ಈ ಪುಸ್ತಕದ ಜನಪ್ರಿಯತೆ ಅದೆಷ್ಟು ಎಂಬುದನ್ನು ಊಹಿಸಬಹುದು.

ಚಿಕ್ಕಂದಿನಲ್ಲಿ ಕೇವಲ ಈ ಪುಸ್ತಕದ ಹೆಡ್ಡಿಂಗ್ ಓದಿ ಅಪ್ಪ ಕೆಲವು ವಿಷಯಗಳನ್ನು ನಮಗೆ ಚಿಕ್ಕದಾಗಿ ತಿಳಿಸಿ ಹೇಳುತ್ತಿದ್ದರು. ಹಾಗೆ ಮನದಲ್ಲಿ ಉಳಿದುಕೊಂಡ ಚಿಂತೆಯ ಮತ್ತು ಜೀವನೋತ್ಸಾಹದ ಕುರಿತಾದ ಈ ಪುಸ್ತಕ ಹಲವು ವರ್ಷಗಳ ನಂತರ ಮತ್ತೆ



ಸಂಕ್ಷಿಪ್ತವಾಗಿ ಓದಿಗೆ ದಕ್ಕಿದಾಗ ಆದ ಆನಂದ ಅಷ್ಟಿಷ್ಟಲ್ಲ. ಈ ಪುಸ್ತಕದ ಕೆಲ ಮಹತ್ವದ ಅಂಶಗಳ ಭಾವಾನುವಾದವನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಆಶಯ ನನ್ನದು.

ಈ ಪುಸ್ತಕದಲ್ಲಿ ಕಾರ್ನೆಗಿ ಚಿಂತೆ ಎನ್ನುವುದು ಒಂದು ಚಟದಂತೆ ಮತ್ತು ಅದನ್ನು ತೊರೆಯುವ ಮೂಲಕ ಹೇಗೆ ಸಂತೋಷ ಮತ್ತು ತೃಪ್ತಿಕರ ಜೀವನವನ್ನು ನಮ್ಮದಾಗಿಸಿಕೊಳ್ಳಬಹುದು ಎಂಬುದರ ಕುರಿತು ವಿವರಿಸಿದ್ದಾನೆ. ನಾವು ವರ್ತಮಾನದಲ್ಲಿ ಜೀವಿಸಬೇಕು ಗತಿಸಿ ಹೋದ ದಿನಗಳ ನೋವಿನ ನೆರಳಾಗಲಿ ಭವಿಷ್ಯದ ಕುರಿತಾದ ಭಯವಾಗಲಿ ನಮಗೆ ಇರಬಾರದು, ವರ್ತಮಾನದಲ್ಲಿ ನಾವು ಯಾವತ್ತೂ ನಂಬಿಕೊಂಡು ಬಂದ ಮೌಲ್ಯಗಳೊಂದಿಗೆ ರಾಜಿಯಾಗದೆ ಜೀವನ ಸಾಗಿಸಬೇಕು ಎಂದು ಡೇಲ್ ಹೇಳುತ್ತಾನೆ.

ಈ ಪುಸ್ತಕದಲ್ಲಿ ಮುಖ್ಯವಾಗಿ ಚಿಂತೆಯ ಕಾರಣಗಳು ಮತ್ತು ಅವುಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಬಗೆ, ವರ್ತಮಾನದಲ್ಲಿ ಎದುರಾಗುವ ಉದ್ಯೋಗ ಸಂಬಂಧಿ ಹೀಯಾಳಿಸುವಿಕೆ ಮತ್ತು ಹಣಕಾಸಿಗೆ ಸಂಬಂಧಪಟ್ಟಂತೆ ಎದುರಾಗುವ ಸವಾಲುಗಳನ್ನು ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಹೇಗೆ ನಿವಾರಿಸಿಕೊಳ್ಳಬಹುದು ಎಂಬುದನ್ನು ಆತ ಹೇಳುತ್ತಾನೆ.

ಚಿಂತೆ ಎಂಬುದು ಸಾಮಾನ್ಯವಾದ ಮತ್ತು ಆರೋಗ್ಯ ಪೂರ್ಣವಾದ ಮಾನಸಿಕ ತೊಂದರೆ, ಆದರೆ ಅತಿಯಾದ ಚಿಂತೆ ಮತ್ತು ದುಗುಡಗಳು ಮನೋದೈಹಿಕ ಸಾಮರ್ಥ್ಯವನ್ನು ಕುಂದಿಸುತ್ತದೆ. ಹೆಚ್ಚಾದ ಚಿಂತೆಯು ಉದ್ವೇಗ, ಖಿನ್ನತೆ ಮತ್ತು ನಿದ್ರಾರಾಹಿತ್ಯಕ್ಕೆ ಎಡೆ ಮಾಡಿಕೊಡುತ್ತದೆ.

ಜೊತೆಗೆ ಇದು ನಮ್ಮ ಗಮನವನ್ನು ಅನವಶ್ಯಕ ವಿಷಯಗಳೆಡೆ ತಿರುಗಿಸಿ ಕಾರ್ಯಕ್ಷಮತೆಯನ್ನು ಕುಂದಿಸುತ್ತದೆ.

ಚಿಂತೆಯನ್ನು ನಿವಾರಿಸಿಕೊಳ್ಳುವ ಹಲವಾರು ತಂತ್ರಗಾರಿಕೆಗಳು ಮನೋವಿಜ್ಞಾನದಲ್ಲಿ ಇದ್ದು ಅವು ನಮ್ಮ ಚಿಂತೆಯನ್ನು ಅವಲೋಕಿಸುವುದರ ಮೂಲಕ ಅವುಗಳ ಋಣಾತ್ಮಕ ಪರಿಣಾಮಗಳನ್ನು ತೊಡೆದು ಹಾಕಲು ಸಹಕಾರಿಯಾಗುತ್ತವೆ.

ಚಿಂತೆಗೆ ಕಾರಣವಾಗುವ ವಿಷಯಗಳನ್ನು ಗುರುತಿಸಿ

ಸಾಮಾನ್ಯವಾಗಿ ನಿಮ್ಮನ್ನು ಚಿಂತೆಗೀಡು ಮಾಡುವ ವಿಷಯಗಳನ್ನು ಗುರುತಿಸಿಕೊಳ್ಳಿ ಒಮ್ಮೆ ಆ ವಿಷಯಗಳ ಕುರಿತು ನಿಮಗೆ ಸ್ಪಷ್ಟ ಅವಗಾಹನೆ ದೊರೆತರೆ ಅವುಗಳನ್ನು ನಿರ್ವಹಿಸುವ ಕುರಿತು ಅರಿವು ಮೂಡುತ್ತದೆ.

ಚಿಂತೆಗೆ ಸವಾಲು ಹಾಕಿ

ನಿಮಗಿರುವ ಚಿಂತೆಗಳು ದುಗುಡಗಳು ನಿಜವಾಗಿಯೂ ಇವೆಯೇ?? ನಿಮ್ಮ ಚಿಂತೆಗಳು ನಿಮ್ಮ ಮನಸ್ಸಿನ ಅನಾಹುತಕಾರಿ ಯೋಚನೆಗಳ ಫಲವೇ!! ಮತ್ತು ನಿಮಗೆ ನಿಮ್ಮ ಚಿಂತೆಗಳನ್ನು ನಿರ್ವಹಿಸಲು ಸಾಧ್ಯವಿದೆ/ಇಲ್ಲವೇ ಎಂಬ ಮೂರು ವಿಷಯಗಳ ಮೇಲೆ ನಿಮ್ಮ ಗಮನವನ್ನು ಕೇಂದ್ರೀಕರಿಸಿ.ನಿಜವಾಗಿಯೂ ನಿಮ್ಮ ಚಿಂತೆಗಳನ್ನು ಸವಾಲಾಗಿ ಸ್ವೀಕರಿಸಿ. ನಿಮ್ಮ ಚಿಂತೆಗಳನ್ನು ವಾಸ್ತವದ ಹಿನ್ನೆಲೆಯಲ್ಲಿ ಅವಲೋಕಿಸಿ ಧನಾತ್ಮಕ ಪರಿಹಾರಗಳ ಕುರಿತು ಯೋಚಿಸಿ.

ನಿಮ್ಮ ನೋವು, ದುಗುಡಗಳ ಕುರಿತು ಚಿಂತಿಸಲೆಂದೇ ದಿನದ ಕೆಲ ಸಮಯವನ್ನು ಮೀಸಲಾಗಿರಿಸಿ. ಆ ಸಮಯದಲ್ಲಿ ನಿಮ್ಮನ್ನು ಬಾಧಿಸುತ್ತಿರುವ ಚಿಂತೆಯ ವಿಷಯವನ್ನು ಪುಸ್ತಕವೊಂದರಲ್ಲಿ ಬರೆದು ಪಕ್ಕಕ್ಕೆ ಇಡಿ. ಇದು ನಿಮ್ಮ ಮನಸ್ಸನ್ನು ನಿರಾಳವಾಗಿಸುತ್ತದೆ.

ನಿಮ್ಮ ದುಗುಡ, ತೊಂದರೆ, ನೋವು, ಚಿಂತೆಗಳನ್ನು ನಿಮ್ಮ ನಂಬಿಕೆಯ ಸ್ನೇಹಿತರು ಸಂಬಂಧಿಗಳು ಮತ್ತು ಆತ್ಮೀಯರೊಂದಿಗೆ ಹಂಚಿಕೊಳ್ಳಿ. ಹಂಚಿಕೊಳ್ಳುವುದರಿಂದ ಮನದಲ್ಲಿನ ಬಹುದೊಡ್ಡ ಭಾರ ಕಡಿಮೆಯಾಗುತ್ತದೆ. ನಿಮ್ಮ ಬಾಧೆಯನ್ನು ಕೇಳುವ ಕಿವಿಗಳು, ನಿಮ್ಮ ಕಣ್ಣೀರನ್ನು ತೊಡೆಯುವ ಕೈಗಳು ನಿಮ್ಮ ನೋವಿಗೆ ಹೆಗಲಾಗುವ ಭುಜಗಳು ಇವೆ ಎಂಬ ಸಮಾಧಾನ ನಿಮಗೆ ದೊರೆಯುತ್ತದೆ.

ಈ ರೀತಿ ಚಿಂತೆಗಳ ಕುರಿತು ಪರಾಮರ್ಶೆ ಮಾಡುವುದರಿಂದ ನಿಮ್ಮ ಬಹುತೇಕ ಸಮಸ್ಯೆಗಳನ್ನು ಎದುರಿಸಲು ನಿಮಗೆ ಅನುಕೂಲವಾಗುತ್ತದೆ. ನಿಮ್ಮ ಚಿಂತೆಗಳು ಕಡಿಮೆಯಾಗಿ ನಿಮ್ಮ ಮನೋ ದೈಹಿಕ ಆರೋಗ್ಯವು ಸುಧಾರಿಸುತ್ತದೆ.

ನಿರ್ಣಯಾತ್ಮಕತೆ

ಒಂದು ಕೆಲಸದ ಕುರಿತ ಹಲವಾರು ಟ್ರಯಲ್ ಎಂಡ್ ಎರರ್ ಗಳನ್ನು ಯೋಚಿಸಿ ಯಾವುದು ಸರಿ ಯಾವುದು ತಪ್ಪು ಎಂಬುದನ್ನು ಅವಲೋಕಿಸಿ ಸರಿಯಾದ ಸಮಯಕ್ಕೆ ಸೂಕ್ತವಾದ ನಿರ್ಧಾರ ತೆಗೆದುಕೊಳ್ಳುವುದನ್ನು ನಿರ್ಣಯಾತ್ಮಕತೆ ಎಂದು ಹೇಳಬಹುದು. ಈ ಸಂಕೀರ್ಣ ಪ್ರಕ್ರಿಯೆಯಲ್ಲಿ ಮೊದಲು ವಿಷಯಗಳನ್ನು ಸಂಗ್ರಹಿಸುವುದು, ನಂತರ ಅವುಗಳಲ್ಲಿರುವ ಸಾಮರ್ಥ್ಯವನ್ನು ಪರೀಕ್ಷಿಸುವುದು ಮತ್ತು ನಾವು ರೂಡಿಸಿಕೊಂಡು ಬಂದಿರುವ ನಂಬುಗೆ ಮತ್ತು ಮೌಲ್ಯಗಳೊಂದಿಗೆ ಈ ವಿಷಯಗಳು ಹೊಂದಿಕೊಳ್ಳುತ್ತವೆಯೇ ಇಲ್ಲವೇ ಎಂಬುದನ್ನು ಅರಿಯುವುದು ಮತ್ತು ನಿರ್ಣಯವನ್ನು ಕೈಗೊಳ್ಳುವುದು. ಆದರೆ ಇಲ್ಲಿ ಮುಖ್ಯವಾಗಿ ನೆನಪಿಡಬೇಕಾದದ್ದು ಒಂದು ಬಾರಿ ಕೈಗೊಂಡ ನಿರ್ಣಯಕ್ಕೆ ಸದಾ ಬದ್ಧರಾಗಿದ್ದು,ಆ ನಿರ್ಣಯವನ್ನು ಜಾರಿಗೆ ತರಬೇಕು ಎಂದು.

ನಿರ್ಣಯಗಳಲ್ಲಿ ಕೆಲವು ವೈಶಿಷ್ಟ್ಯಪೂರ್ಣವಾದರೆ ಮತ್ತೆ ಕೆಲವು ನಿರ್ಣಯಗಳು ಅತ್ಯಂತ ಸರಳ ಮತ್ತು ನೇರವಾಗಿ ಇರುತ್ತವೆ. ಉದಾಹರಣೆಗೆ ಇಂದು ರಾತ್ರಿ ಏನನ್ನು ಊಟ ಮಾಡಬೇಕು ಎಂಬುದು ಅತ್ಯಂತ ಸರಳವಾದ ನಿರ್ಣಯ.

ಮತ್ತೆ ಕೆಲವು ನಿರ್ಣಯಗಳು ಅತ್ಯಂತ ಕ್ಲಿಷ್ಟವಾಗಿದ್ದು ಬದುಕಿನ ಗತಿಯನ್ನೇ ಬದಲಿಸುವಂಥವು, ಉದಾಹರಣೆಗೆ ಪ್ರೌಢ ಶಿಕ್ಷಣದ ನಂತರ ಯಾವ ಕೋರ್ಸ್ ತೆಗೆದುಕೊಳ್ಳಬೇಕು, ಏನನ್ನು ಓದಬೇಕು ಯಾವ ಊರಿನಲ್ಲಿ ಓದಬೇಕು ಉದ್ಯೋಗವನ್ನು ಎಲ್ಲಿ ಮಾಡಬೇಕು ಈ ರೀತಿಯ ನಿರ್ಣಯಗಳು ಜಟಿಲವಾಗಿರುತ್ತವೆ.

ಉತ್ತಮವಾದ ನಿರ್ಣಯವನ್ನು ಕೈಗೊಳ್ಳಲು ಕೆಲವು ಮುಖ್ಯ ಸಂಗತಿಗಳನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.



* ಯಾವ ವಿಶೇಷ ನಿರ್ಣಯವನ್ನು ನೀವು ಕೈಗೊಳ್ಳುತ್ತಿದ್ದೀರಿ ಎಂಬುದನ್ನು ಅರಿಯುವುದು.

* ಮಾಹಿತಿಯನ್ನು ಸಂಗ್ರಹಿಸುವುದು... ನಮ್ಮ ನಿರ್ಣಯಕ್ಕೆ ಪೂರಕವಾಗುವ ವಿಷಯಗಳ ಕುರಿತು ಮಾಹಿತಿಯನ್ನು ಸಂಗ್ರಹಿಸುವುದು ಮತ್ತು ಅವುಗಳ ಸಾಮರ್ಥ್ಯವನ್ನು ಅರಿಯುವುದು.

* ನಾವು ತೆಗೆದುಕೊಂಡ ನಿರ್ಧಾರದ ಒಳಿತು ಮತ್ತು ಕೆಡುಕುಗಳನ್ನು, ಸಾಧಕ ಬಾಧಕಗಳ ಕುರಿತು ಅರಿಯುವುದು

* ನಿರ್ಣಯ ಕೈಗೊಳ್ಳುವ ಜೊತೆಗೆ ಬದಲಿ ವ್ಯವಸ್ಥೆಗಳ ಕುರಿತು ಯೋಚಿಸುವುದು ಕೂಡ ಅತ್ಯಂತ ಅವಶ್ಯಕ.

* ನಿಮ್ಮ ನಿರ್ಣಯಕ್ಕೆ ಬದ್ಧರಾಗಿ ಕಾರ್ಯ ನಿರ್ವಹಿಸುವುದು

ಈ ರೀತಿ ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಮೂಲಕ ವ್ಯಕ್ತಿಯು ತಾನು ನಂಬಿಕೊಂಡು ಬಂದಿರುವ ವೈಯುಕ್ತಿಕ ಮೌಲ್ಯಗಳನ್ನು ಮತ್ತು ಆದ್ಯತೆಗಳನ್ನು ಹೊಂದಿರುವಂತೆಯೇ ನಿರ್ಣಯವನ್ನು ಕಾರ್ಯಗತಗೊಳಿಸುವುದು.

ವರ್ತಮಾನದಲ್ಲಿ ಜೀವಿಸುವುದು

ವರ್ತಮಾನದಲ್ಲಿ ಜೀವಿಸುವುದು ಎಂದರೆ ಬದುಕಿನಲ್ಲಿ ಬಂದದ್ದನ್ನು ಬಂದಂತೆಯೇ, ಅದು ಇರುವಂತೆಯೇ ಸ್ವೀಕರಿಸುವುದು. ಇದರರ್ಥ ಗತದಲ್ಲಿ ನಡೆದು



ಹೋದ ವಿಷಯಗಳನ್ನು ಚಿಂತಿಸದೇ ಭವಿಷ್ಯದ ಕುರಿತು ಭಯವಿಲ್ಲದೆ ವರ್ತಮಾನದ ಮೇಲೆ ಮಾತ್ರ ನಮ್ಮ ಗಮನವನ್ನು ಕೇಂದ್ರೀಕರಿಸುವುದು.

ವರ್ತಮಾನದಲ್ಲಿ ಜೀವಿಸುವುದರಿಂದ ಹಲವಾರು ಲಾಭಗಳಿವೆ, ಅವುಗಳೆಂದರೆ

* ಒತ್ತಡವಿಲ್ಲದ ಬದುಕು... ವರ್ತಮಾನದೆಡೆ ನಿಮ್ಮ ಚಿತ್ತವನ್ನು ನೀವು ಕೇಂದ್ರೀಕರಿಸಿದಾಗ ನಿಮಗೆ ಭೂತದ ಕುರಿತ ಪಶ್ಚಾತಾಪವಾಗಲಿ ಭವಿಷ್ಯದ ಕುರಿತ ಭಯವಾಗಲಿ ಇಲ್ಲವಾಗುವುದರಿಂದ ಒತ್ತಡಕ್ಕೆ ಆಸ್ಪದ ಇರುವುದಿಲ್ಲ.

* ಸಂತೋಷ ಮತ್ತು ನೆಮ್ಮದಿಯ ಜೀವನ... ವರ್ತಮಾನದಲ್ಲಿ ಜೀವಿಸುವ ಜನರು ಹೆಚ್ಚು ಸಂತುಷ್ಟರು ಮತ್ತು ನೆಮ್ಮದಿಯನ್ನು ಹೊಂದಿರುತ್ತಾರೆ ಎಂಬುದನ್ನು ಅಧ್ಯಯನಗಳು ತೋರಿಸುತ್ತವೆ

* ಉತ್ತಮ ಬಾಂಧವ್ಯ... ವರ್ತಮಾನದಲ್ಲಿ ಜೀವಿಸುವುದರಿಂದ ನೀವು ನಿಮ್ಮ ಜೊತೆಗಿರುವವರೊಂದಿಗೆ ಹೆಚ್ಚಿನ ಪ್ರೀತಿ, ವಿಶ್ವಾಸ, ಕಾಳಜಿಯುಕ್ತ ಸಂಬಂಧವನ್ನು ಹೊಂದುತ್ತೀರಿ. ಹಿಂದಿನ ಯಾವುದೇ ಕಹಿ ಘಟನೆಗಳನ್ನು ಕೆದುಕುವುದಿಲ್ಲ.

* ಹೆಚ್ಚಿದ ಕ್ರಿಯಾಶೀಲತೆ ಮತ್ತು ಉತ್ಪಾದಕತೆ.... ಅನ್ಯ ವಿಷಯಗಳತ್ತ ಎಳಸದೆ, ಕಣ್ಣ ಮುಂದಿರುವ ಕೆಲಸದ ಮೇಲೆ ಶ್ರದ್ಧೆಯುಳ್ಳವರಾಗಿರುವುದರಿಂದ ನಿಮ್ಮ ಕ್ರಿಯಾಶೀಲತೆ ಹೆಚ್ಚುತ್ತದೆ... ಅದರ ಪರಿಣಾಮವಾಗಿ ಉತ್ಪಾದಕತೆಯು ಹೆಚ್ಚುತ್ತದೆ.

ಆದ್ದರಿಂದ ವರ್ತಮಾನದಲ್ಲಿ ಜೀವಿಸಿ.

ವರ್ತಮಾನದಲ್ಲಿ ಜೀವಿಸಲು ಏನು ಮಾಡಬೇಕು? ಇಲ್ಲಿವೆ ಕೆಲ ಸಲಹೆಗಳು.

* ನಿಮ್ಮ ಉಸಿರಾಟ ಕ್ರಿಯೆಯೆಡೆ ಗಮನ ಕೊಡಿ. ದೀರ್ಘವಾಗಿ ಉಸಿರನ್ನು ತೆಗೆದುಕೊಳ್ಳುವುದು ಮತ್ತು ಹೊರಬಿಡುವುದನ್ನು ಅಭ್ಯಾಸ ಮಾಡಿ. ನಿಮ್ಮ ದೇಹದ ಒಳಹೋಗುವ ಮತ್ತು ಹೊರಬರುವ ಉಸಿರಾಟದೆಡೆ ಗಮನವನ್ನು ಕೇಂದ್ರೀಕರಿಸುವ ಮೂಲಕ ದೇಹದ ಮೇಲಾಗುವ ಪರಿಣಾಮಗಳನ್ನು ಅನುಭವಿಸಿ. ಈ ರೀತಿಯ ದೀರ್ಘ ಉಸಿರಾಟದ ಕ್ರಿಯೆ ನಿಮ್ಮನ್ನು ಸದಾ ವರ್ತಮಾನದಲ್ಲಿ ಇರಿಸಲು ಸಹಾಯಕವಾಗಿರುತ್ತದೆ.

* ನಿಮ್ಮ ಪಂಚೇಂದ್ರಿಯಗಳ ಕಾರ್ಯನಿರ್ವಹಣೆಯನ್ನು ಗಮನಿಸಿ. ನಿಮ್ಮ ಸುತ್ತಣ ಪರಿಸರದಲ್ಲಿರುವ ವಸ್ತುಗಳನ್ನು ವಿಷಯಗಳನ್ನು ನೋಡುವ ಕೇಳುವ ಸ್ಪರ್ಶಿಸುವ ಘ್ರಾಣಿಸುವ ಮತ್ತು ಆಸ್ವಾದಿಸುವುದನ್ನು ಅಭ್ಯಸಿಸಿ. ಇದೊಂದು ರೀತಿಯ ಧ್ಯಾನಸ್ಥ ಸ್ಥಿತಿ, ಅನುಭವಿಸಿಯೇ ಅರಿಯಬೇಕು.


* ನಿಮ್ಮ ಯೋಚನೆ ಮತ್ತು ಭಾವನೆಗಳ ಮೇಲೆ

ಲಕ್ಷ್ಯವಿರಲಿ.. ನಿಮ್ಮ ಸುತ್ತ ನಡೆಯುತ್ತಿರುವ ಕ್ರಿಯೆಗಳ ಕುರಿತ ನಿಮ್ಮ ಭಾವನೆಗಳು ಮತ್ತು ಯೋಚನೆಗಳ ಮೇಲೆ ಯಾವುದೇ ರೀತಿಯ ನಿರ್ಣಯಾತ್ಮಕವಲ್ಲದ ನಿಗಾ ಇರಲಿ. ನಿಮ್ಮ ಭಾವನೆಗಳು ಮತ್ತು ಯೋಚನೆಗಳು ಇರುವಂತೆಯೇ ಅವುಗಳನ್ನು ಒಪ್ಪಿಕೊಳ್ಳಿ ಮತ್ತು ಬದಿಗಿರಿಸಿ.

* ಉತ್ತಮ ಸಂವಹನ ಕ್ರಿಯೆಯಲ್ಲಿ ತೊಡಗಿಕೊಳ್ಳಿ.. ನಿಮ್ಮೆದುರಿಗಿರುವವರೊಂದಿಗೆ ಮಾತನಾಡುವಾಗ ಅವರ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡಿ, ಚೆನ್ನಾಗಿ ಕೇಳಿಸಿಕೊಳ್ಳಿ ಲಕ್ಷವಿಟ್ಟು ಪ್ರತಿಕ್ರಿಯಿಸಿ.

* ಒಂದು ಬಾರಿಗೆ ಒಂದೇ ಕೆಲಸಕ್ಕೆ ಬದ್ಧರಾಗುವುದು.. ಒಂದು ಬಾರಿ ಒಂದೇ ಕೆಲಸ ಎಂಬ ಸಿದ್ಧಾಂತವನ್ನು ಪಾಲಿಸಿ. ಒಂದೇ ಸಮಯದಲ್ಲಿ ಹಲವಾರು ಕೆಲಸಗಳಿಗೆ ಕೈಹಾಕಿ ವಿಫಲತೆ ಕಾಣುವುದಕ್ಕಿಂತ ಒಂದು ಬಾರಿಗೆ ಒಂದೇ ಕೆಲಸದಲ್ಲಿ ಹೆಚ್ಚು ಶ್ರದ್ಧೆಯಿಂದ ಕಾರ್ಯನಿರ್ವಹಿಸಿ.

ವರ್ತಮಾನದಲ್ಲಿ ಜೀವಿಸುವುದು ನಿರಂತರ ಪ್ರಕ್ರಿಯೆ. ಎಷ್ಟೋ ಬಾರಿ ನಾವು ನಮ್ಮ ಭೂತ ಮತ್ತು ಭವಿಷ್ಯಗಳನ್ನು ನಡುವೆ ಮತ್ತೆ ಮತ್ತೆ ತೂಗುಯ್ಯಾಲೆ ಆಡುತ್ತೇವೆ. ಆದರೆ ನಿರಂತರ ಶ್ರದ್ಧೆ ಮತ್ತು ಪ್ರಯತ್ನದಿಂದ ಮತ್ತೆ ವರ್ತಮಾನ




ಎಂಬ ನಿಲುಗಡೆಗೆ ಬಂದೇ ಬರುತ್ತೇವೆ. ಸತತ ಪ್ರಯತ್ನದಿಂದ ವರ್ತಮಾನದಲ್ಲಿ ಜೀವಿಸುವುದು ಹೆಚ್ಚು ಸರಳವಾಗುತ್ತದೆ.

ಹಾಸ್ಯಪ್ರಜ್ಞೆಯನ್ನು ಬೆಳೆಸಿಕೊಳ್ಳಿ

ಹಾಸ್ಯಪ್ರಜ್ಞೆ ಎನ್ನುವುದು ಜೀವನದ ಹಲವಾರು ತೊಂದರೆಗಳನ್ನು ಸರಳವಾಗಿ ಬಗೆಹರಿಸುವ ಉತ್ತಮ ಸಾಧನ. ಅತ್ಯುತ್ತಮವಾದ ಹಾಸ್ಯಪ್ರಜ್ಞೆಯನ್ನು ಬೆಳೆಸಿಕೊಳ್ಳುವುದರಿಂದ ಮನುಷ್ಯ ಒತ್ತಡವನ್ನು ನಿಭಾಯಿಸಬಲ್ಲವನಾಗುತ್ತಾನೆ. ಉತ್ತಮವಾಗಿ ಸಂಬಂಧಗಳನ್ನು ನಿರ್ವಹಿಸುತ್ತಾನೆ ಮತ್ತು ಜೀವನವನ್ನು ಹೆಚ್ಚು ರಸಮಯವಾಗಿಸಿಕೊಳ್ಳುತ್ತಾನೆ.

ಹಾಸ್ಯ ಪ್ರಜ್ಞೆಯನ್ನು ಬೆಳೆಸಿಕೊಳ್ಳುವ ಬಗೆ

ಹೆಚ್ಚು ಹೆಚ್ಚು ತಮಾಷೆಯನ್ನು ಒಳಗೊಂಡಿರುವ ಪುಸ್ತಕಗಳನ್ನು ಓದಿ, ನಗೆ ಚಟಾಕಿಗಳನ್ನು ಹಾರಿಸುವ ಚಲನಚಿತ್ರಗಳನ್ನು, ಜೋಕುಗಳ ವಿಡಿಯೋಗಳನ್ನು, ಟಿವಿ ಶೋಗಳನ್ನು,. ಕಾಮಿಡಿ ಶೋಗಳನ್ನು ಕೂಡ ನೋಡುವ ಮೂಲಕ ಹಾಸಿಗೆ ಕಣ್ಣಾಗುವ ಕಿವಿಯಾಗುವ



ಸಾಧ್ಯತೆಗಳನ್ನು ಹೆಚ್ಚಿಸಿಕೊಳ್ಳಿ.

ಗಮನಹರಿಸಿ.. ದೈನಂದಿನ ಜೀವನದ ಜಂಜಾಟದಲ್ಲಿಯೂ ಕೂಡ ನಗೆಯುಕ್ಕಿಸುವ ತಮಾಷೆಯ ಪ್ರಸಂಗಗಳನ್ನು ಗಮನಿಸಿ. ಹೆಚ್ಚು ಹೆಚ್ಚು ಇಂತಹ ವಿಷಯಗಳೆಡೆ ಗಮನಹರಿಸಿದಾಗ ನೀವು ಕೂಡ ನಿಮ್ಮಲ್ಲಿನ ಹಾಸ್ಯಪ್ರಜ್ಞೆಯನ್ನು ಹೆಚ್ಚಿಸಿಕೊಳ್ಳಬಹುದು.

ನಿಮ್ಮನ್ನೇ ನೀವು ಗೇಲಿ ಮಾಡಿಕೊಳ್ಳಲು ಹೆದರಬೇಡಿ... ಎಲ್ಲರೂ ಸಣ್ಣ ಪುಟ್ಟ ತಮ್ಮ ತಪ್ಪುಗಳನ್ನು ಮಾಡುತ್ತಾರೆ. ನಿಮ್ಮನ್ನೇ ನೀವು ಗೇಲಿ ಮಾಡಿಕೊಳ್ಳುವ ಮೂಲಕ ನಿಮ್ಮನ್ನು ನೀವು ಗಂಭೀರವಾಗಿ ಪರಿಗಣಿಸದೆ ಎಲ್ಲವನ್ನು ಸರಳವಾಗಿ ಸ್ವೀಕರಿಸುವ ಸಾಧ್ಯತೆಗಳು ಹೆಚ್ಚು. ಅಹಮಿಕೆಗಿಂತ ಸರಳತೆ ಹೆಚ್ಚು ಸೂಕ್ತ.

ಹಾಸ್ಯಪ್ರಜ್ಞೆ ಇರುವ ತಮಾಷೆ ಮಾಡುವ ಸ್ವಭಾವದವರ ಒಡನಾಟದಲ್ಲಿ ಇರಿ. ಇದು ಕೂಡ ನಿಮ್ಮಲ್ಲಿ ಉತ್ತಮ ಹಾಸ್ಯ ಪ್ರಜ್ಞೆಯನ್ನು ಬೆಳೆಸುವಲ್ಲಿ ಸಹಕಾರಿಯಾಗಿರುತ್ತದೆ. ಹಾಸ್ಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಸದಾ ಕಾರ್ಯನಿರತರಾಗಿರಿ ಮತ್ತು ತಾಳ್ಮೆಯ ಅವಶ್ಯಕತೆಯನ್ನು ಮನಗಾಣಿರಿ.

ಈ ಪುಸ್ತಕದ ಮುಖ್ಯ ಅಂಶಗಳು ಹೀಗಿವೆ.

ಭಯ ಮತ್ತು ಚಿಂತೆಯೊಂದಿಗೆ ವ್ಯವಹರಿಸುವುದು

ಭಯ ಮತ್ತು ಆತಂಕವನ್ನು ಎದುರಿಸಲು ಮತ್ತು ಜಯಿಸಲು ಪುಸ್ತಕವು ಪ್ರಾಯೋಗಿಕ ತಂತ್ರಗಳನ್ನು ಒದಗಿಸುತ್ತದೆ, ಉದಾಹರಣೆಗೆ ಕೆಟ್ಟ ಸನ್ನಿವೇಶವನ್ನು ವಿಶ್ಲೇಷಿಸುವುದು, ಅನಿವಾರ್ಯವನ್ನು ಸ್ವೀಕರಿಸುವುದು ಮತ್ತು ಸಕಾರಾತ್ಮಕ ಮಾನಸಿಕ ಮನೋಭಾವವನ್ನು ಅಭಿವೃದ್ಧಿಪಡಿಸುವುದು.

ಚಿಂತೆಯ ಅಭ್ಯಾಸವನ್ನು ಮುರಿಯುವುದು

ಸ್ಪಷ್ಟ ಗುರಿಗಳನ್ನು ಹೊಂದುವಂತೆ ಮಾಡುವುದು, ಒಬ್ಬರ ಆಲೋಚನೆಗಳನ್ನು ಸಂಘಟಿಸುವುದು ಮತ್ತು ಸಮಸ್ಯೆಗಳನ್ನು ಪರಿಹರಿಸಲು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳುವುದು ಸೇರಿದಂತೆ ಚಿಂತಿಸುವ ಅಭ್ಯಾಸವನ್ನು ಮುರಿಯುವ ವಿಧಾನಗಳನ್ನು ಕಾರ್ನೆಗಿ ವಿವರಿಸುತ್ತಾರೆ. ಅವರು ಒತ್ತಡ ನಿವಾರಕವಾಗಿ ನಗು ಮತ್ತು ಹಾಸ್ಯದ ಮೌಲ್ಯವನ್ನು ಒತ್ತಿಹೇಳುತ್ತಾರೆ.

ಒತ್ತಡವನ್ನು ನಿರ್ವಹಿಸುವುದು

ದೈಹಿಕ ವ್ಯಾಯಾಮದ ಪ್ರಾಮುಖ್ಯತೆ, ಆರೋಗ್ಯಕರ ಜೀವನಶೈಲಿಯನ್ನು ಕಾಪಾಡಿಕೊಳ್ಳುವುದು ಮತ್ತು ವ್ಯಕ್ತಿಗೆ ಕೆಲಸ ಮಾಡುವ ವಿಶ್ರಾಂತಿ ತಂತ್ರಗಳನ್ನು ಕಂಡುಹಿಡಿಯುವುದು ಸೇರಿದಂತೆ ಒತ್ತಡವನ್ನು ನಿಭಾಯಿಸಲು ಲೇಖಕರು ಸಲಹೆ ನೀಡುತ್ತಾರೆ.

ಟೀಕೆ ಮತ್ತು ಕಷ್ಟಕರ ಜನರನ್ನು ನಿಭಾಯಿಸುವುದು

ಕಾರ್ನೆಗಿ ಅವರು ಟೀಕೆ ಮತ್ತು ಸವಾಲಿನ ವ್ಯಕ್ತಿತ್ವಗಳನ್ನು ಎದುರಿಸಲು ಮಾರ್ಗದರ್ಶನ ನೀಡುತ್ತಾರೆ, ಪರಸ್ಪರ ಸಂಬಂಧಗಳಲ್ಲಿ ಸಹಾನುಭೂತಿ ಮತ್ತು ತಿಳುವಳಿಕೆಯ ಶಕ್ತಿಯನ್ನು ಒತ್ತಿ ಹೇಳುತ್ತಾರೆ.

ಜೀವನದಲ್ಲಿ ಸಂತೋಷವನ್ನು ಕಂಡುಕೊಳ್ಳುವುದು

ಓದುಗರು ತಮ್ಮ ಆಸಕ್ತಿಗಳು ಮತ್ತು ಭಾವನೆಗಳನ್ನು ಅನುಸರಿಸುವ ಮೂಲಕ, ಬೆಂಬಲಿತ ಸ್ನೇಹಿತರ ಜಾಲವನ್ನು ಅಭಿವೃದ್ಧಿಪಡಿಸುವ ಮೂಲಕ ಮತ್ತು ಅವರ ಮೌಲ್ಯಗಳು ಮತ್ತು ಗುರಿಗಳೊಂದಿಗೆ ಹೊಂದಿಕೊಳ್ಳುವ ರೀತಿಯಲ್ಲಿ ಬದುಕುವ ಮೂಲಕ ತಮ್ಮ ದೈನಂದಿನ ಜೀವನದಲ್ಲಿ ಸಂತೋಷ ಮತ್ತು ತೃಪ್ತಿಯನ್ನು ಕಂಡುಕೊಳ್ಳಲು ಪುಸ್ತಕವು ಪ್ರೋತ್ಸಾಹಿಸುತ್ತದೆ.

* ಅಂತಿಮವಾಗಿ 1948ರಲ್ಲಿ ಡೇಲ್ ಕಾರ್ನೆಗಿ ಬರೆದಿರುವ ಈ ಪುಸ್ತಕ ಇಂದಿಗೂ ತನ್ನ ಪ್ರಸ್ತುತತೆಯನ್ನು ಕಾಯ್ದುಕೊಂಡಿದೆ. ಇಡೀ ಪುಸ್ತಕದ ಮುಖ್ಯ ಅಂಶಗಳನ್ನು ಆಧರಿಸಿ ಬರೆದ ಈ ಲೇಖನದ ಭಾವಾನುವಾದ ನಿಮಗೆ ಮೆಚ್ಚುಗೆಯಾದರೆ ನನ್ನ ಈ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

# ಅಂತಾರಾಷ್ಟ್ರೀಯ ಆತ್ಮಸಾಕ್ಷಿ ದಿನ ಆಚರಣೆ

ಉದಯರಶ್ಮಿ ನ್ಯೂಸ್



ವಿಜಯಪುರ: ಪ್ರತಿವರ್ಷ ಏಪ್ರಿಲ್ 5 ರಂದು ಜಗತ್ತಿನಾದ್ಯಂತ ಅಂತಾರಾಷ್ಟ್ರೀಯ ಆತ್ಮಸಾಕ್ಷಿ ದಿನವನ್ನು ಆಚರಿಸಲಾಗುತ್ತದೆ. 'ಪ್ರೀತಿ ಮತ್ತು ಆತ್ಮಸಾಕ್ಷಿಯೊಂದಿಗೆ ಶಾಂತಿಯನ್ನು ಉತ್ತೇಜಿಸುವ' ವಿಷಯದೊಂದಿಗೆ ಈ ಆತ್ಮಸಾಕ್ಷಿ ದಿನವನ್ನು ಆಚರಣೆ ಮಾಡಲಾಗುತ್ತಿದೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆ 2019 ಜುಲೈ 25ರಂದು ಪ್ರೀತಿ ಮತ್ತು ಆತ್ಮಸಾಕ್ಷಿಯೊಂದಿಗೆ ಶಾಂತಿಯ ಸಂಸ್ಕೃತಿ ಉತ್ತೇಜಿಸುವ ನಿರ್ಣಯವನ್ನು ಅಂಗೀಕರಿಸುವುದರೊಂದಿಗೆ ಈ ದಿನವನ್ನು ಘೋಷಿಸಿತು.

ಸ್ಥಳೀಯ, ರಾಷ್ಟ್ರೀಯ ಮತ್ತು ಪ್ರಾದೇಶಿಕ ಸಮುದಾಯಗಳ ಪದ್ಧತಿಗಳಿಗೆ ಅನುಗುಣವಾಗಿ ಪ್ರೀತಿ ಮತ್ತು ಜಾಗೃತಿಯೊಂದಿಗೆ ಶಾಂತಿಯನ್ನು ನಿರ್ಮಿಸುವ ಮಹತ್ವದ ಬಗ್ಗೆ ಈ ದಿನವು ಜಾಗೃತಿ ಮೂಡಿಸುತ್ತದೆ. ಅಲ್ಲದೇ ಪ್ರೀತಿ ಮತ್ತು ಶಾಂತಿ, ಜಾಗೃತಿ ಮತ್ತು ಸುಸ್ಥಿರ ಅಭಿವೃದ್ಧಿ ನಡುವಿನ ಸಂಬಂಧವನ್ನೂ ಈ ದಿನ ಎತ್ತಿ ತೋರಿಸುತ್ತದೆ.

ಮಾನವರು ಪರಸ್ಪರ ಸಹಾನುಭೂತಿಯಿಂದ ನಡೆದುಕೊಳ್ಳಬೇಕು ಮತ್ತು ಕ್ರೌರ್ಯ ತಡೆಯಲು ಸಹೋದರತ್ವ ಭಾವನೆ ಬೆಳೆಸಿಕೊಳ್ಳಬೇಕು. ಧರ್ಮ, ಭಾಷೆ, ಜನಾಂಗ ಅಥವಾ ಲಿಂಗವನ್ನು ಲೆಕ್ಕಿಸದೇ ಶಾಂತಿಯುತ ಸಂಬಂಧಗಳನ್ನು ಕಾಪಾಡಿಕೊಳ್ಳುವುದು ಮತ್ತು ಭವಿಷ್ಯವನ್ನು ಹಿಂಸಾಚಾರದಿಂದ ರಕ್ಷಿಸುವ ಅಗತ್ಯವನ್ನು ಇದು ತಿಳಿಸಿದೆ.

ಇದು ಮಾನವ ಹಕ್ಕುಗಳು ಮತ್ತು ಗೌರವವನ್ನು ಆದರಿಸಿದ ಆತ್ಮಸಾಕ್ಷಿಯ ಬಗ್ಗೆ ಅರಿವು ಮೂಡಿಸುವ ಪ್ರಮುಖ ಹೆಜ್ಜೆಯಾಗಿದೆ. ದ್ವೇಷ, ಯುದ್ಧಗಳು ನಡೆಯುತ್ತಿರುವ ಈ ಯುಗದಲ್ಲಿ ಇದು ಅಗತ್ಯವಿದೆ.

ಈ ನಿಮಿತ್ತ ತಾಲೂಕಿನ ನಾಗಠಾಣ ಗ್ರಾಮದ ಅನುಶ್ರೀ, ಶ್ರೀನಿಧಿ, ಸುಶಾಂತ್, ಶ್ರೇಯಾ ಬಂಡೆ ಅವರು ಅಂತಾರಾಷ್ಟ್ರೀಯ ಆತ್ಮಸಾಕ್ಷಿ ದಿನವನ್ನು ಆಚರಿಸಿದರು.

# ದಲಿತರು ಕಾಂಗ್ರೆಸ್ ಗೆ ಕೇವಲ ಮತ ಬ್ಯಾಂಕ್ :ಜಿಗಜಿಣಗಿ

ಉದಯರಶ್ಮಿ ನ್ಯೂಸ್



ಸಿಂದಗಿ: ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮತ್ತು ಪಕ್ಷದವರು ನನ್ನನ್ನೇ ನೇರ ಗುರಿಯಾಗಿಸಿಕೊಂಡು ವಿಮರ್ಶೆ ಮಾಡುತ್ತಿದ್ದಾರೆ ಎಂದು ಬಿಜೆಪಿ ಲೋಕಸಭಾ ಅಭ್ಯರ್ಥಿ ರಮೇಶ ಜಿಗಜಿಣಗಿ ಹೇಳಿದರು.

ಪಟ್ಟಣದ ಬಿಜೆಪಿ ಕಾರ್ಯಾಲಯದಲ್ಲಿ ಶುಕ್ರವಾರ ಸಾಯಂಕಾಲ ಲೋಕಸಭಾ ಚುನಾವಣಾ ನಿಮಿತ್ಯವಾಗಿ ಹಮ್ಮಿಕೊಂಡ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆ ದೀನದಲಿತರ ಪರವಾಗಿ ಇರುವ ಅನುದಾನವನ್ನು ಯಾವ ಸರಕಾರಗಳೂ ಬೇರೊಂದಕ್ಕೆ ಬಳಕೆ ಮಾಡಿಕೊಂಡಿರಲಿಲ್ಲ. ಆದರೆ ರಾಜ್ಯ ಕಾಂಗ್ರೆಸ್ ಸರಕಾರ ದಲಿತರ ಎಸ್‌ಸಿಪಿಟಿ ಹಣವನ್ನು ಬೇರೆ ಬೇರೆ ಇಲಾಖೆಗೆ ಬಳಸಿದ್ದು ನ್ಯಾಯವೇ? ದಲಿತರನ್ನು ಕಾಂಗ್ರೆಸ್ ಪಕ್ಷ ಕೇವಲ ಮತ ಬ್ಯಾಂಕ್ ಆಗಿ ಬಳಕೆ ಮಾಡಿಕೊಳ್ಳುತ್ತಿದೆ. ರಾಜ್ಯದಲ್ಲಿ ದಲಿತರಿಗೆ ಅನ್ಯಾಯವಾದಾಗ ಎಸ್.ಸಿ ಮಹಾದೇವಪ್ಪ, ರಾಜು ಆಲಗೂರ ಏನು ಮಾಡುತ್ತಿದ್ದಿರಿ? ನನಗೆ ಕಾಂಗ್ರೆಸ್ ಪಕ್ಷಕ್ಕೆ ಆಫರ್ ಬಂದಾಗ ತಿರಸ್ಕರಿಸಲು ಕಾರಣ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಸಮಾಧಿಗೆ ಸ್ಥಳ ಕೊಡದ ಪಕ್ಷಕ್ಕೆ ನನಗೇನು ಎಂಬ ಕಾರಣಕ್ಕೆ ಬಿಜೆಪಿ ಪಕ್ಷ ಸೇರಿದ್ದೇನೆ. ಅದನ್ನು ಪಂಚತೀರ್ಥ ಮಾಡಿ ಪ್ರವಾಸಿ ಕ್ಷೇತ್ರವನ್ನಾಗಿ ಮಾಡಿದ್ದು ಬಿಜೆಪಿ ಸರಕಾರ ಎಂದು ಹೇಳಿದರು.

ಈ ವೇಳೆ ಮಾಜಿ ವಿಪ ಸದಸ್ಯ ಅರುಣ ಶಹಾಪುರ ಮಾತನಾಡಿ, ಕಾಂಗ್ರೆಸ್ ಪಕ್ಷ ಅನಗತ್ಯವಾಗಿ ನರೇಂದ್ರ ಮೋದಿ ಅವರನ್ನು ಕಾಂಗ್ರೆಸ್ ಪಕ್ಷ ಹೀಯಾಳಿಸಿ ಟೀಕೆ ಮಾಡಿ ಪ್ರಚಾರ ಮಾಡುತ್ತಿರುವುದು ಸರಿಯಲ್ಲ, ರೂ.1ಲಕ್ಷ ಕೋಟಿ ಅನುದಾನ ತಂದು ಅಭಿವೃದ್ಧಿ ಮತ್ತು ವೈಯಕ್ತಿಕ ಆಧಾರದ ಮೇಲೆ ಜಿಗಜಿಣಗಿ ಅವರು ಮತಯಾಚನೆ ಮಾಡುತ್ತಿದ್ದಾರೆ. ಜಿಗಜಿಣಗಿ ಅವರನ್ನು ಬೈಯೋದರಿಂದ ನಿಮಗೆ ಮತ ಬರೋಲ್ಲ. ಕಾಂಗ್ರೆಸ್ ಸಂಘಟನೆಗೆ ಜಿಲ್ಲಾಧ್ಯಕ್ಷರಾಗಿ ನೀವೇ ನ್ಯಾಯಕೊಡೋದು ಆಗಿಲ್ಲ. ಅದನ್ನು ಬಿಟ್ಟು ಜಿಗಜಿಣಗಿ ಅವರ ಮೇಲೆ ಆರೋಪಿಸುವುದು ಸರಿಯಲ್ಲ ಎಂದು ಹರಿಹಾಯ್ದರು.

ಕಾಂಗ್ರೆಸ್ ಪಕ್ಷದಲ್ಲಿ ಅಭ್ಯರ್ಥಿ ಇಲ್ಲದ ಕಾರಣ ಆಲಗೂರಗೆ ಟಿಕೆಟ್ ನೀಡಿದ್ದಾರೆ. ಇವೆಲ್ಲಾ ಟೀಕೆ ಟಿಪ್ಪಣಿ ಬಿಟ್ಟು ನೀವು ಶಾಸಕರಾಗಿದ್ದ ಸಮಯದಲ್ಲಿ ನಿಮ್ಮ ಜನಾಂಗಕ್ಕೆ ಕೊಟ್ಟ ಕೊಡುಗೆ ತೋರಿಸಿ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಾಜಿ ರಮೇಶ ಭೂಸನೂರ ಮಾತನಾಡಿ, ಜಿಲ್ಲೆಯಲ್ಲಿ ಜಿಗಜಿಣಗಿ ಗೆಲುವು ನಿಶ್ಚಿತ. ಮೋದಿಯವರು 3ನೆಯ ಬಾರಿ ಪ್ರಧಾನಿ ಖಚಿತ. 400ಕ್ಕೂ ಅಧಿಕ ಸೀಟ್‌ಗಳು ಬರುತ್ತವೆ. ಬಂಜಾರಾ ಸಮುದಾಯದ ಮತಗಳು ಬೇಡ ಎಂದು ಯಾವತ್ತೂ ಹೇಳಿಲ್ಲ. ಆ ಸಮುದಾಯಕ್ಕೆ ಬಿಜೆಪಿ ಟಿಕೇಟ್ ನೀಡಿದೆ. ಆದರೆ ಕಾಂಗ್ರೆಸ್ ಒಂದೇ ಒಂದು ಮಂತ್ರಿ ಸ್ಥಾನ ಕೊಟ್ಟಿಲ್ಲ. ಅದು ಹೋಗಲಿ ಟಿಕೆಟ್ ನೀಡಲಿಲ್ಲ ಎಂದು ಆರೋಪಿಸಿದರು.

ಈ ವೇಳೆ ಮಲ್ಲಿಕಾರ್ಜುನ ಜೋಗುರ, ಸಿದ್ದು ಬುಳ್ಳಾ, ಎಸ್.ಎಸ್.ಹಿರೇಮಠ, ಗುರು ತಳವಾರ, ಸಾಯಬಣ್ಣ ದೇವರಮನಿ, ಖಾಜು ಬಂಕಲಗಿ, ಯಲ್ಲು ಇಂಗಳಗಿ ಸೇರಿದಂತೆ ಬಿಜೆಪಿ ಪಕ್ಷದ ಕಾರ್ಯಕರ್ತರು ಇದ್ದರು.

# ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಮ್

ಉದಯರಶ್ಮಿ ನ್ಯೂಸ್



ಸಿಂದಗಿ: ಹಸಿರು ಕ್ರಾಂತಿಯ ಮೂಲಕ ದೇಶದ ಅಹಾರ ಭದ್ರತೆಯನ್ನು ವಿಶ್ವ ಮಟ್ಟದಲ್ಲಿ ಗಮನ ಸೆಳೆಯುವ ನಿಟ್ಟಿನಲ್ಲಿ ಅತ್ಯಂತ ಯಶಸ್ವಿಯಾಗಿ ನಿಭಾಯಿಸಿದ ಕೀರ್ತಿ ಡಾ.ಬಾಬು ಜಗಜೀವನ್ ರಾಮ್ ರವರಿಗೆ ಸಲ್ಲುತ್ತದೆ ಎಂದು ಗ್ರೇಡ್ 2 ತಹಶೀಲ್ದಾರ್ ಇಂದ್ರಾಬಾಯಿ ಬಳಗಾನೂರ ಹೇಳಿದರು.

ಪಟ್ಟಣದ ತಾಲೂಕು ಆಡಳಿತ ವತಿಯಿಂದ ಏರ್ಪಡಿಸಿದ್ದ ಡಾ.ಬಾಬು ಜಗಜೀವನ್‌ರಾವ್ ಅವರ ಜಯಂತಿಯಲ್ಲಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಈ ವೇಳೆ ಕರ್ನಾಟಕ ಆದಿಜಂಭಾವ ಜನಸಂಘದ ಉತ್ತರ ಕರ್ನಾಟಕ ವಲಯಾಧ್ಯಕ್ಷ ಸಾಯಬಣ್ಣ ದೇವರಮನಿ ಮಾತನಾಡಿ, 50 ವರ್ಷಗಳ ತಮ್ಮ ರಾಜಕೀಯ ಜೀವನದಲ್ಲಿ ಸಂವಿಧಾನದ ರಚನಾ ಸಭೆಯ ಸದಸ್ಯರಾಗಿ ಹಾಗೂ ರಾಷ್ಟ್ರ ನಾಯಕರಾಗಿ ಭಾರತದ ಉಪಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದಾರೆ. ನೆಹರು ಅವರ ಸಂಪುಟದಲ್ಲಿ ಕೃಷಿ, ಆಹಾರ, ರೈಲ್ವೆ, ಸಾರಿಗೆ ಹಾಗೂ ಸಮುದಾಯ ಅಭಿವೃದ್ಧಿ, ಕಾರ್ಮಿಕ ಉದ್ಯೋಗಕ್ಕಾಗಿ ಹೆಚ್ಚು ಗಮನವಿಟ್ಟು ಶ್ರಮಿಸಿದರು ಎಂದರು.

ಈ ವೇಳೆ ಜಿ.ಎಸ್.ರೋಡಗಿ, ಏಕನಾಥ ದ್ವಾಶ್ಯಾಳ, ರಾಜಕುಮಾರ ಭಾಸಗಿ, ಎ.ನಾರಾಯಣಸ್ವಾಮಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ: ಪಟ್ಟಣದ ಎಪಿಎಂಸಿ ಯಾರ್ಡ್‌ನಲ್ಲಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯದಲ್ಲಿ ಡಾ.ಬಾಬು ಜಗಜೀವನ್‌ರಾಮ್ ಅವರ ಜಯಂತಿ ಆಚರಣೆ ಮಾಡಲಾಯಿತು.

ಈ ವೇಳೆ ಸಿಡಿಪಿಓ ಶಂಭುಲಿಂಗ ಹಿರೇಮಠ ಡಾ.ಬಾಬು ಜಗಜೀವನ್‌ರಾವ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ಎಸಿಡಿಪಿಒ ಎಸ್.ಎನ್. ಕೋರವಾರ, ವಿಜಯಕುಮಾರ, ಸೇರಿದಂತೆ ಮೇಲ್ವಿಚಾರಕಿಯರು ಇದ್ದರು.

ಶ್ರೀ ಪದ್ಮರಾಜ ಮಹಿಳಾ ಕಾಲೇಜ ಸಿಂದಗಿ: ಪಟ್ಟಣದ ಶ್ರೀ ಪದ್ಮರಾಜ ಮಹಿಳಾ ಪದವಿ ಮತ್ತು ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಡಾ.ಬಾಬು ಜಗಜೀವನ್‌ರಾಮ್ ಅವರ ಜಯಂತಿ ಆಚರಣೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಉಪನ್ಯಾಸಕರಾದ ಉಮೇಶ ಪೂಜೇರಿ, ಜಿ.ವಿ.ಪಾಟೀಲ, ಎಸ್. ಎಮ್.ಹೂಗಾರ, ಬಿ.ಬಿ.ನಂದಿಮಠ, ಎಂ.ಕೆ.ಬಿರಾದಾರ, ಎಮ್. ಎಮ್.ಈಳಗೇರ, ಎಲ್.ಎಸ್. ಗೋಗಿ, ಹೇಮಾ ಕಾಸರ, ಡಿ. ಎಂ.ಪಾಟೀಲ್. ಸತೀಶ ಕಕ್ಕಸಗೇರಿ, ಶಂಕರ ಕುಂಬಾರ, ವಿಜಯಲಕ್ಷ್ಮಿ ಭಜಂತ್ರಿ, ಮಮತಾ ಹರನಾಳ ಸೇರಿದಂತೆ ಅನೇಕರಿದ್ದರು.

# ಡಾ.ಬಾಬು ಜಗಜೀವನ ರಾಮ್ ಜಯಂತ್ಯುತ್ಸವ

ಉದಯರಶ್ಮಿ ನ್ಯೂಸ್



ಮುದ್ದೇಬಿಹಾಳ: ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ ರಾಮ್ ಅವರ 117 ನೇ ಜಯಂತ್ಯುತ್ಸವವನ್ನು, ಪಟ್ಟಣ ಆಲಮಟ್ಟಿ ರಸ್ತೆಯಲ್ಲಿರುವ ಡಾ.ಬಾಬು ಜಗಜೀವರಾಮ್ ಅವರ ವೃತ್ತಕ್ಕೆ ಹೂಮಾಲೆಗಳಿಂದ ಅಲಂಕರಿಸುವ ಮೂಲಕ, ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮತ್ತು ತಾಲೂಕು ಆಡಳಿತದ ವತಿಯಿಂದ ತಹಶೀಲ್ದಾರ ಕಚೇರಿಯಲ್ಲಿ ಅವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಸರಳ ಹಾಗೂ ಸುಂದರವಾಗಿ ಆಚರಿಸಲಾಯಿತು.

ಈ ವೇಳೆ ತಹಶೀಲ್ದಾರ ಬಸವರಾಜ ನಾಗರಾಳ, ತಾಲೂಕು ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿ ಎಸ್.ಎಸ್.ಕಲ್ಮನಿ, ಸಿಪಿಐ ಮಲ್ಲಿಕಾರ್ಜುನ ತುಳಸಿಗೇರಿ, ಪಿಎಸ್‌ಐ ಸಂಜೀವ ತಿಪರೆಡ್ಡಿ, ತಾಲೂಕು ಆರೋಗ್ಯ ಅಧಿಕಾರಿ ಡಾ.ಸತೀಶ ತಿವಾರಿ, ಪಶು ಸಂಗೋಪನೆ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಶಿವಾನಂದ ಮೇಟಿ, ಮುಖಂಡರಾದ ಡಿ.ಬಿ.ಮುದೂರ, ವಾಯ್.ಎಚ್.ವಿಜಯಕರ, ಸಿ.ಜಿ.ವಿಜಯಕರ, ಶಿವು ಶಿವಪೂರ, ಯಲ್ಲಪ್ಪ ಚಲವಾದಿ, ಅಂಗವಿಕಲರ ಒಕ್ಕೂಟದ ಅಧ್ಯಕ್ಷ ಎಸ್.ಕೆ.ಘಾಟಿ ಸೇರಿದಂತೆ ಮತ್ತೀತರರು ಇದ್ದರು.

# ಪ್ರತಿಯೊಬ್ಬರ ಮತವೂ ಅತಿ ಅಮೂಲ್ಯ :ಪವಾರ

ಉದಯರಶ್ಮಿ ನ್ಯೂಸ್



ಇಂಡಿ: ಪ್ರತಿಯೊಬ್ಬರ ಮತವೂ ಅಮೂಲ್ಯವಾದದ್ದು, ಎಲ್ಲರೂ ಚುನಾವಣೆ ವ್ಯವಸ್ಥೆಯಲ್ಲಿ ಪಾಲ್ಗೊಳ್ಳಬೇಕು. ತಮ್ಮ ಕುಟುಂಬ, ಸ್ನೇಹಿತರು ನೆರೆಹೊರೆಯವರು ನೈತಿಕ ಮತದಾನದ ಬಗ್ಗೆ ಜಾಗೃತಿ ಮೂಡಿಸಿ ಮತದಾನದ ಹಕ್ಕು ಚಲಾಯಿಸಲು ಪ್ರೇರೆಪಿಸಬೇಕೆಂದು ಚುನಾವಣೆ ರಾಯಭಾರಿ ರಾಜೇಶ ಪವಾರ ಹೇಳಿದರು.

ಅವರು ಪಟ್ಟಣದಲ್ಲಿ ತಾಲೂಕಾ ಸ್ವೀಪ್ ಸಮಿತಿ, ತಾಪಂ ಇಂಡಿ, ತಾಲೂಕು ಆರೋಗ್ಯ ಇಲಾಖೆ, ಸಾರ್ವಜನಿಕ ಸರಕಾರಿ ಆಸ್ಪತ್ರೆ ಸಹಯೋಗದಲ್ಲಿ ನಡೆದ ಮತದಾನದ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ತಾಲೂಕು ಸ್ವೀಪ್ ಸಮಿತಿ ಅಧ್ಯಕ್ಷೆ ಮತ್ತು ಇಒ ನೀಲಗಂಗಾ ಬಬಲಾದ ಮಾತನಾಡಿ ಮತದಾನ ಕೇವಲ ಹಕ್ಕಷ್ಟೇ ಅಲ್ಲ. ಕರ್ತವ್ಯವೂ ಹೌದು. ಯಾವದೇ ಆಮಿಷಗಳಿಗೆ ಒಳಗಾಗದೆ ಮತದಾನ ಮಾಡಬೇಕು ಎಂದರು.

ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ತಾಲೂಕಾ ಆರೋಗ್ಯಾಧಿಕಾರಿ ಅರ್ಚನಾ ಕುಲಕರ್ಣಿ ಆಸ್ಪತ್ರೆಯ ಮುಖ್ಯಸ್ಥ ಐ.ಎಸ್.ಧಾರವಾಡಕರ, ವಿನೋದ ಸಜ್ಜನ, ಸಾಹಿಲ್ ಧನಶೆಟ್ಟಿ, ಡಾ॥ ಪ್ರೀತಿ ಕೋಳೆಕರ, ಡಾ॥ ಅಮೀತ ಕೋಳೆಕರ, ಡಾ॥ ವಿಪುಲ್ ಕೋಳೆಕರ, ನಂದಿಪ ರಾಠೋಡ, ಪ್ರಭಾಕರ ಪೂಜಾರಿ, ರಾಮಗೌಡ ಸರಬಡಗಿ ಮತ್ತಿತರಿದ್ದರು.

ನಂದೀಪ ರಾಠೋಡ ಇವರಿಂದ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

# ಕೊಳವೆಬಾವಿ ಕೊರೆಯಲು ಪೂರ್ವಾನುಮತಿ ಕಡ್ಡಾಯ :ಡಿಸಿ

ಉದಯರಶ್ಮಿ ನ್ಯೂಸ್




ವಿಜಯಪುರ: ಯಾವುದೇ ಕೊಳವೆಬಾವಿ ಕೊರೆಯುವ ಪೂರ್ವದಲ್ಲಿ ಸ್ಥಳಿಯ ಆಡಳಿತದಿಂದ ನಿರಪೇಕ್ಷಣಾ ಪತ್ರ ಪಡೆಯುವುದು ಕಡ್ಡಾಯವಾಗಿದೆ ಎಂದು ಜಿಲ್ಲಾಧಿಕಾರಿ ಟಿ. ಭೂಬಾಲನ್ ಹೇಳಿದರು.

ಜಿಲ್ಲಾಧಿಕಾರಿ ಕಚೇರಿಯ ವಿ ಸಿ ಹಾಲ್ ನಲ್ಲಿ ಶುಕ್ರವಾವಾರ ಕಂದಾಯ, ಶಾಲಾ ಶಿಕ್ಷಣ, ಗ್ರಾಮೀಣ ಕುಡಿಯುವ ನೀರು ಮತ್ತು ಸರಬರಾಜು ಇಲಾಖೆ ಹಾಗೂ ಜಿಲ್ಲಾ ಪಂಚಾಯತ್ ಅಧಿಕಾರಿಗಳೊಂದಿಗೆ ತುರ್ತು ವಿಡಿಯೋ ಸಂವಾದ ಸಭೆ ನಡೆಸಿ ಮಾತನಾಡಿದ ಅವರು, ಇಂಡಿ ತಾಲೂಕಿನ ಲಚ್ಯಾಣ ತೋಟದ ಕೊಳವೆಬಾವಿಯಲ್ಲಿ ಸಿಲುಕಿದ್ದ ಮಗುವಿನ ಪ್ರಕರಣ ಭವಿಷ್ಯದಲ್ಲಿ ಮರುಕಳಿಸದಿರಲು ಗ್ರಾಮ, ಪಟ್ಟಣ ನಗರ ಯಾವುದೇ ಪ್ರದೇಶದಲ್ಲಾದರೂ ಕೊಳವೆಬಾವಿ ಕೊರೆಯವ ಮುನ್ನ ರೈತರು, ಸಾರ್ವಜನಿಕರಲ್ಲಿ ಅನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ ಮತ್ತು ಸಫಲ/ವಿಫಲವಾದ ಕೊಳವೆಬಾವಿಗಳನ್ನು ಸುರಕ್ಷಿತವಾಗಿ ಮುಚ್ಚುವ ವ್ಯವಸ್ಥೆಯಾಗಬೇಕು ಎಂಬುದರ ಕುರಿತು ಸ್ಥಳಿಯ ಆಡಳಿತಾಧಿಕಾರಿಗಳು ಸೂಚನಾ ಫಲಕಗಳಲ್ಲಿ ಅಳವಡಿಸುವ ಮೂಲಕ ಜಾಗೃತಿ ಮೂಡಿಸಬೇಕು ಎಂದರು.

ಈಗಾಗಲೇ ಕೊಳವೆಬಾವಿಗಳ ಸುರಕ್ಷತೆ ಕುರಿತಂತೆ ಸರಕಾರದ ಸುತ್ತೋಲೆ ಇದ್ದು ಅದನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಕಾರ್ಯವಾಗಬೇಕು. ಗ್ರಾಮ ಪಂಚಾಯತ್ ಅಧಿಕಾರಿ, ಕಾರ್ಯದರ್ಶಿ ಮತ್ತು ಕಂದಾಯ ಇಲಾಖೆಯ ಗ್ರಾಮ ಲೆಕ್ಕಿಗರು ಸರಕಾರದ ಈ ಸುತ್ತೋಲೆಯ ನಿರ್ದೇಶನಗಳನ್ನು ಪಾಲಿಸದೇ ಕರ್ತವ್ಯಲೋಪವೆಸಗಿ ಯಾವುದೇ ಅವಘಡ ಜರುಗಿದಲ್ಲಿ ಅಂತಹ ಅಧಿಕಾರಿಗಳನ್ನು ನೇರಹೊಣೆಗಾರರನ್ನಾಗಿ ಮಾಡಿ ಅವರ ವಿರುದ್ದ ಇಲಾಖಾ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಒಂದು ವಾರದೊಳಗಾಗಿ ಜಿಲ್ಲೆಯಲ್ಲಿರುವ ಸರಕಾರಿ ಕೊಳವೆಬಾವಿಗಳ ಮಾಹಿತಿಯನ್ನು ನೀಡಬೇಕು, ಚಾಲ್ತಿಯಲ್ಲಿರುವ ಮತ್ತು ದುರಸ್ತಿಯಲ್ಲಿರುವ ಕುರಿತ ಅಂಕಿ ಸಂಖ್ಯೆಗಳ ನಿಖರವಾದ ಮಾಹಿತಿಯನ್ನು ನೀಡುವ ಕಾರ್ಯವಾಗಬೇಕು. ಮುಂದಿನ ದಿನಗಳಲ್ಲಿ ಯಾವುದೇ ಕಾರಣಕ್ಕೂ ನಿರಪೇಕ್ಷಣಾಪತ್ರ ಪಡೆಯದ ಕೊಳವೆಬಾವಿಗೆ ಹೆಸ್ಕಾಂ ಅಧಿಕಾರಿಗಳು ವಿದ್ಯುತ್ ಸಂಪರ್ಕ ನೀಡಬಾರದೆಂದು ಸೂಚಿಸಿದರು.

ಗುರುವಾರದಂದು ನಡೆದ ಎಸ್ ಎಸ್ ಎಲ್ ಸಿ ತೃತೀಯ ಭಾಷಾ ಪತ್ರಿಕೆಗೆ ಸಾಮೂಹಿಕ ನಕಲು ಮಾಡಲು ಅವಕಾಶ ಮಾಡಿ ಕೊಡಲಾಗಿದೆ ಎಂಬ ದೂರು ಬರಲಾಗಿದ್ದು, ಈ ಕುರಿತಂತೆ ಸಂಬಂಧಪಟ್ಟವರ ವಿರುದ್ದ ಈಗಾಗಲೇ ಶಿಸ್ತು ಕ್ರಮ ಜರುಗಿಸಿದ್ದು, ಶನಿವಾರದಂದು ನಡೆಯುವ ದ್ವಿತಿಯ ಭಾಷಾ ಇಂಗ್ಲೀಷ್ ಪತ್ರಿಕೆಯ ಪರೀಕ್ಷೆಗೆ ಜಿಲ್ಲೆಯ ಎಲ್ಲಾ 127 ಪರೀಕ್ಷಾ ಕೇಂದ್ರಗಳಿಗೂ ಚಾಲ್ತಿಯಲ್ಲಿರುವ ಸಿ ಸಿ ಕ್ಯಾಮರಾಗಳನ್ನು ಅಳವಡಿಸುವ ಕಾರ್ಯವಾಗಬೇಕು. ನಕಲು ಮಾಡುವ ವಿದ್ಯಾರ್ಥಿಗಳನ್ನು ಅಮಾನತ್( ಡಿಬಾರ್) ಹಾಗೂ ನಕಲು ಪೂರೈಸುವ, ಸಹಕರಿಸುವವರ ವಿರುದ್ದ ಎಫ್ ಐ ಆರ್ ಮಾಡುವ ಮೂಲಕ ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ಜರುಗಿಸಲಾಗುವುದು ಎಂದರು.

ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಕ್ಕೆ ಸಮರ್ಪಕವಾಗಿ ನೀರಿನ ಟ್ಯಾಂಕರಗಳನ್ನು ಕಳುಹಿಸಿ ಜವಾಬ್ದಾರಿಯಿಂದ ಕೆಲಸಮಾಡಬೇಕು. ಲೋಕಸಭಾ ಚುನಾವಣೆಯ ಮತದಾನಕ್ಕೆ ಕೆಲವೇ ದಿನಗಳು ಬಾಕಿ ಇರುವದರಿಂದ ಮತದಾನ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಸ್ವೀಪ್ ಸಮೀತಿಯಿಂದ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳಬೇಕು ಎಂದರು

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಶಿ ಆನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ, ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ ಸೇರಿ ಇತರರು ಇದ್ದರು.

# ಅನ್ನ ಛತ್ರಕ್ಕೆ ಸಹಾಯಧನದ ಚೆಕ್ ವಿತರಣೆ



ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ಗ್ರಾಮಗಳಲ್ಲಿನ ದೇವಸ್ಥಾನಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದರ ಜೊತೆಗೆ ಅವುಗಳನ್ನು ಜೀರ್ಣೋದ್ಧಾರ ಮಾಡುವುದರಿಂದ ಗ್ರಾಮಗಳು ಪ್ರಗತಿ ಹೊಂದುತ್ತವೆ, ಗ್ರಾಮ ಪ್ರಗತಿ ಹೊಂದುವುದ್ದರಿಂದ ಜನರು ಅಭಿವೃದ್ಧಿ ಹೊಂದುತ್ತಾರೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕು ಯೋಜನಾಧಿಕಾರಿ ಮಂಜುನಾಥ ಹೆಚ್.ಕೆ. ಹೇಳಿದರು.

ತಾಲೂಕಿನ ಕಣಕಾಲ ಗ್ರಾಮದ ಮಡಿವಾಳೇಶ್ವರ ದೇವಸ್ಥಾನದ ಅನ್ನ ಛತ್ರಕ್ಕೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ದೇಸ್ಥಾನದ ಸಮಿತಿಗೆ 1.5ಲಕ್ಷ ರೂಪಾಯಿಗಳ ಚಕ್ ವಿತರಣೆ ಮಾಡಿ ಮಾತನಾಡಿದ ಅವರು, ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗಡೆ ಅವರು ಗ್ರಾಮದ ಮಡಿವಾಳೇಶ್ವರ ಅನ್ನ ಛತ್ರಕ್ಕೆ ಪ್ರಸಾದದ ರೂಪದಲ್ಲಿ ಸಹಾಯಧನವನ್ನು ನೀಡಿದ್ದಾರೆ ಅದನ್ನು ಸದ್ಬಳಕೆ ಮಾಡಿಕೊಂಡು ಅಭಿವೃದ್ಧಿಪಡಿಸಿಕೊಳ್ಳಲು ಮುಂದಾಗಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಯೋಜನೆಯ ಮೇಲ್ವಿಚಾರಕ ಅನಂತಗೌಡ ರಂಗೊಳ್ಳಿ, ಗ್ರಾಮದ ಮುಖಂಡರಾದ ಶಂಕರಗೌಡ ಪಾಟೀಲ, ಮಲ್ಲಕಾಜಪ್ಪ ಅಂಗಡಿ, ಸಿದ್ಧನಗೌಡ ಪಾಟೀಲ, ಕಾಶೀನಾಥ ಸಜ್ಜನ, ಅಯ್ಯಪ್ಪ ದಿನ್ನಿ, ಗುಂಡುಭಟ್ ಜೋಶಿ, ಚನ್ನಬಸಪ್ಪ ಅಂಗಡಿ, ಮಾರುತಿ ಹಡಪದ, ಮಲ್ಲಪ್ಪ ಇಟಗಿ, ಸಿದ್ರಾಮ ಎತ್ತನಟ್ಟಿ ಸೇರಿದಂತೆ ಇತರರು ಇದ್ದರು.

# ಧರ್ಮಸ್ಥಳ ಸಂಸ್ಥೆಯಿಂದ ವಾತ್ಸಲ್ಯ ಮನೆ ಹಸ್ತಾಂತರ

ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ತಾಲೂಕಿನ ಕಣಕಾಲ ಗ್ರಾಮದ ನಿರ್ಗತಿಕ ವಯೋವೃದ್ಧೆ ಈರಮ್ಮ ಬಡಿಗೇರ ಅವರಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನವಿಕಾಸ ವಾತ್ಸಲ್ಯ ಕಾರ್ಯಕ್ರಮದಡಿಯ ನಿರ್ಮಿಸಿದ ವಾತ್ಸಲ್ಯ ಮನೆಯನ್ನು ಜನಜಾಗೃತಿ ವೇದಿಕೆಯ ಅಧ್ಯಕ್ಷ ಅಪ್ಪುಗೌಡ ಪಾಟೀಲ ಮನಗೂಳಿ ಬುಧವಾರ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕಾ ಯೋಜನಾಧಿಕಾರಿ ಮಂಜುನಾಥ ಎಚ್.ಕೆ. ಮಾತನಾಡಿ, ದಾರಿಯಲ್ಲಿ ವಾಸ ಮಾಡುವವರಿಗೆ, ಯಾರೂ ನೋಡದೇ ಇರುವ ನಿರ್ಗತಿಕರ ಬದುಕನ್ನು ಹಸನ್ನಾಗಿಸಿ ಅವರ ಬದುಕನ್ನು ಕಟ್ಟಿಕೊಡುವ ಉದ್ದೇಶದಿಂದ ಮಾತೃಶ್ರೀ ಹೇಮಾವತಿ ಅಮ್ಮನವರು ನಿರ್ಗತಿಕರಿಗೆ ಮನೆಯನ್ನು ಕಟ್ಟಿಕೊಡುವದು ಮನದಾಸೆ ಹೊಂದಿದ್ದಾರೆ. ವಯೋವೃದ್ಧೆಯಾಗಿರುವ ಈರಮ್ಮ ಬಡಿಗೇರ ಅವರಿಗೆ ಉಳಿಯಲು ಸರಿಯಾದ ಮನೆ ಇಲ್ಲದೇ ಇರುವದರಿಂದಾಗಿ ಮಾತೃಶ್ರೀ ಹೇಮಾವತಿ ಅಮ್ಮನವರ ಆಶಯದಂತೆ ವಾತ್ಸಲ್ಯ ಎಂಬ ಮನೆಯನ್ನು ಕಟ್ಟಿಕೊಡುವ ಮೂಲಕ ಅವರಿಗೆ ಈ ಮನೆಯನ್ನು ಹಸ್ತಾಂತರ ಮಾಡಲಾಗುತ್ತಿದೆ. ತಾಲೂಕಿನಲ್ಲಿ ಸುಮಾರು 70 ಸದಸ್ಯರಿಗೆ ಪ್ರತಿ ತಿಂಗಳು ಮಾಶಾಸನ, ವರ್ಷದಲ್ಲಿ ಎರಡ್ಮೂರು ಸಲ ಪೌಷ್ಟಿಕ ಆಹಾರ ಸೇರಿ ಅವರಿಗೆ ಜೀವನಾವಶ್ಯಕ ಸಾಮಗ್ರಿಗಳನ್ನು ನೀಡಲಾಗುತ್ತಿದೆ ಎಂದರು.



ಈ ಸಂದರ್ಭದಲ್ಲಿ ಕಣಕಾಲ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶರಣಮ್ಮ ಕುಂಬಾರ, ಬಸವಸೈನ್ಯ ಮುಖಂಡ ಶ್ರೀಕಾಂತ ಕೊಟ್ರಶೆಟ್ಟಿ, ಸಂಸ್ಥೆಯ ವಲಯದ ಮೇಲ್ವಿಚಾರಕ ಅನಂತಗೌಡ ರಂಗೊಳ್ಳಿ, ಜನವಿಕಾಸ ಸಮನ್ವಯಾಧಿಕಾರಿ ಶ್ರೀದೇವಿ ಕಾಳಸಿಂಗೆ, ಸೇವಾ ಪ್ರತಿನಿಧಿಗಳಾದ ಅನುರಾಧ ಬೀರಲದಿನ್ನಿ, ಕೌಶಿಂಬಿ ಕನ್ನೂರ, ಭಾಗೀರಥಿ ಸಾಲವಾಡಗಿ, ಸಪ್ನಾ ನಾಯಕ ಇತರರು ಇದ್ದರು.

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR